ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 222 RNI Number : KNKAN/25/A2770 22-08-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :222 ರಾಯಚೂರು 22-08-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಅತ್ಯಾಚಾರವೆಸಗಿ ಯುವತಿಯ ಕೊಲೆ; ಮೂವರ ಬಂಧನ



ರಾಯಚೂರು,ಆ.21-

ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಅನುಮಾನಾಸ್ಪದವಾಗಿ ಬಾವಿಯಲ್ಲಿ ಯುವತಿಯ ಶವ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವತಿಯ ತಂದೆ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ಈ ಪೈಕಿ ಮೂವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮತ್ತೊಬ್ಬ ಆರೋಪಿ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಯಲು ಪ್ರದೇಶದಲ್ಲಿ ಶೌಚಕ್ಕೆ ತೆರಳಿದ್ದ 22 ವರ್ಷದ ಯುವತಿ ಮರುದಿನ ಗ್ರಾಮದ ಬಾವಿಯ ಮೆಟ್ಟಿಲಿನ ಮೇಲೆ ಶವವಾಗಿ ಪತ್ತೆಯಾಗಿದ್ದಳು. ಯುವತಿಯ ಮೇಲೆ ಅತ್ಯಾಚಾರವೆಸಗಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿ ಆಕೆಯ ತಂದೆ ತಿಮ್ಮರೆಡ್ಡಿ ಪೊಲೀಸರಿಗೆ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಗುಂಡ್ಯ ತಂದೆ ರಾಮಣ್ಣ (22), ಮಹಾಂತೇಶ ತಂದೆ ಹುಲಿಗೆಪ್ಪ (22), ವೀರೇಶ ತಂದೆ ರಾಜಪ್ಪ (23) ಹಾಗೂ ಮುಂಡರಗಿ ಬಸವರಾಜ ತಂದೆ ಮಹಾದೇವ (45) ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರಲ್ಲಿ ಮೂವರನ್ನು ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಪೊಲೀಸರು ಶೋಧ ನಡೆಸುತ್ತಿದ್ದಾರೆ ಎಂದು ಸಿಪಿಐ ಎಂ. ಶಶಿಕಾಂತ ತಿಳಿಸಿದ್ದಾರೆ.

ಐಜಿ ಭೇಟಿ, ಪರಿಶೀಲನೆ: ಘಟನೆ ಹಿನ್ನೆಲೆಯಲ್ಲಿ ಗುರುವಾರ ಸಂಜೆ ಹೊಕ್ರಾಣಿ ಗ್ರಾಮಕ್ಕೆ ಐಜಿ ಪಿ.ಎಸ್. ಹರ್ಷ, ಜಿಲ್ಲಾಧಿಕಾರಿ ಪೂವಿತಾ ಎಸ್., ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ ಹಾಗೂ ಡಿವೈಎಸ್ಪಿ ಚಂದ್ರಶೇಖರ ನಾಯಕ ಭೇಟಿ ನೀಡಿ ಘಟನಾ ಸ್ಥಳವನ್ನು ಪರಿಶೀಲಿಸಿದರು. ಪ್ರಕರಣದ ತನಿಖೆ ಹಾಗೂ ಮುಂದಿನ ಕ್ರಮಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹೊಕ್ರಾಣಿ ಗ್ರಾಮಕ್ಕೆ ರವಿ ಬೋಸರಾಜು ಭೇಟಿ - ಸಂತ್ರಸ್ಥ ಕುಟುಂಬಕ್ಕೆ ಸಾಂತ್ವನ

ಎನ್‌ಎಸ್ ಬೋಸರಾಜು, ಶಾಸಕ ಹಂಪಯ್ಯ ನಾಯಕರಿಂದ ಸಂತ್ರಸ್ತ ಕುಟುಂಬಕ್ಕೆ ₹2 ಲಕ್ಷ ನೆರವು



ಸಿರವಾರ,ಆ.21-

ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿದ್ದಾರೆ ಎನ್ನಲಾದ ಯುವತಿಯ ಕುಟುಂಬಕ್ಕೆ ಮಾಜಿ ಸಚಿವ ಹಾಗೂ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಮತ್ತು ಶಾಸಕ ಹಂಪಯ್ಯ ನಾಯಕ್ ಅವರ ಪರವಾಗಿ ಕಾಂಗ್ರೆಸ್ ರಾಜ್ಯ ಯುವ ಮುಖಂಡ ರವಿ ಬೋಸರಾಜು ಅವರು ₹2 ಲಕ್ಷ ಆರ್ಥಿಕ ನೆರವು ನೀಡಿದರು.

ಬೆಂಗಳೂರಿನಲ್ಲಿ ವಿಧಾನಮಂಡಲ ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಎನ್.ಎಸ್. ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ್ ಅವರು ಖುದ್ದಾಗಿ ಗ್ರಾಮಕ್ಕೆ ಬರಲು ಸಾಧ್ಯವಾಗದ ಕಾರಣ, ಪ್ರಕರಣ ಸುದ್ದಿ ತಿಳಿಯುತ್ತಿದ್ದಂತೆಯೇ ಅವರ ಪರವಾಗಿ ರವಿ ಬೋಸರಾಜು ಅವರು ಹೊಕ್ರಾಣಿ ಗ್ರಾಮಕ್ಕೆ ತೆರಳಿ ಸಂತ್ರಸ್ತ ಕುಟುಂಬದ ಸದಸ್ಯರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.

ಕುಟುಂಬದವರಿಗೆ ಸಾಂತ್ವನ ಹೇಳಿ ಮಾತನಾಡಿದ ಅವರು, ''ಅಶ್ವಿನಿ ಅವರ ಕುಟುಂಬದ ನೋವು ಮತ್ತು ದುಃಖವನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಆ ಭಗವಂತ

3 ನೇ ಪುಟಕ್ಕೆ

ಕರಡಕಲ್‌ನಲ್ಲಿ ದಲಿತ ಮಹಿಳೆಯ ಅನುಮಾನಾಸ್ಪದ ಸಾವು : ಅತ್ಯಾಚಾರವೆಸಗಿ ಕೊಲೆ ಶಂಕೆ



ಲಿಂಗಸೂಗೂರು,ಆ.21-

ಲಿಂಗಸುಗೂರು ತಾಲೂಕಿನ ಕರಡಕಲ್ ಗ್ರಾಮದ ದಲಿತ ಮಹಿಳೆ ರಾಣೆಮ್ಮ (35), ಪತಿ ತಿಪ್ಪಣ್ಣ ಬಜಲರ ಎಂಬುವವರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ನಡೆದಿದೆ. ರಾಣೆಮ್ಮ ಅವರು ಬುಧವಾರ ಸಂಜೆ ಕಟ್ಟಿಗೆ ತರಲು ಜಾಲಿಬೆಂಚಿ ಗ್ರಾಮದ ಕಡೆಗೆ ತೆರಳಿದ್ದರು ಎನ್ನಲಾಗಿದೆ. ಗುರುವಾರ ಹೊಲದಲ್ಲಿ ಶವ ಪತ್ತೆತಾಗಿದೆ. ಅತ್ಯಾಚಾರ ಮಾಡಿ ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿದೆ.ಆದರೆ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇನ್ನೂ ಅಧಿಕೃತವಾಗಿ ಯಾವುದೇ ಅಂತಿಮ ಮಾಹಿತಿ ನೀಡಿಲ್ಲ.

ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ವರದಿ ಬಂದ ಬಳಿಕ ಸಾವಿನ ನಿಖರ ಕಾರಣ ಹಾಗೂ ಅತ್ಯಾಚಾರ ನಡೆದಿರುವ ಬಗ್ಗೆ ಸ್ಪಷ್ಟತೆ ದೊರೆಯಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಘಟನಾ ಸ್ಥಳದಿಂದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗಿದ್ದ, ಮಹಿಳೆಯೊಂದಿಗೆ ಕೊನೆಯದಾಗಿ ಸಂಪರ್ಕದಲ್ಲಿದ್ದವರು ಯಾರು, ಆಕೆ ತೆರಳಿದ್ದ ಮಾರ್ಗ ಹಾಗೂ ಘಟನೆಯ ಸಂದರ್ಭದಲ್ಲಿ ಸ್ಥಳದಲ್ಲಿದ್ದವರ ಕುರಿತು ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

ದಲಿತ ಯುವತಿಯ ಕೊಲೆ ಪ್ರಕರಣ; ನಿಷ್ಪಕ್ಷಪಾತ ತನಿಖೆ, ಉಗ್ರ ಶಿಕ್ಷೆಗೆ ಒತ್ತಾಯ.

ಛಲವಾದಿ ಮಹಾಸಭಾದಿಂದ ದಲಿತರ ನಾಲ್ಕು ಪ್ರಕರಣ ಗಂಭೀರವಾಗಿ ಪರಿಗಣಿಸಲು ಮನವಿ



ರಾಯಚೂರು,ಆ.21-

ಹೊಕ್ರಾಣಿಯಲ್ಲಿ ನಡೆದ ಯುವತಿಯ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ ನಾಲ್ಕನೆ ಆರೋಪಿಗೂ ಶೀಘ್ರವೇ ಬಂಧಿಸಿ ನಿಷ್ಪಕ್ಷಪಾತ ತನಿಖೆ ನಡೆಸಿ ಸಂತ್ರಸ್ಥ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಛಲವಾದಿ ಮಹಾಸಭಾದ ಜಿಲ್ಲಾ ಧ್ಯಕ್ಷ ವಿಶ್ವನಾಥ ಪಟ್ಟಿ ಒತ್ತಾಯಿಸಿದರು.

ಅವರು ಶುಕ್ರವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿ, ಹೊಕ್ರಾಣಿ ಪ್ರಕರಣದಲ್ಲಿ ಯುವತಿ ಬುಧವಾರ ರಾತ್ರಿ ಬಯಲು ಬಹಿರ್ದೆಸೆಗೆ ಹೋಗಿ ಕಾಣೆಯಾಗಿದ್ದಳು ಪೋಷಕರು ರಾತ್ರಿಯೇ ದೂರು ನೀಡಿದ್ದರು ಸ್ಥಳೀಯ ಪೊಲೀಸರು ಗಂಭೀರವಾಗಿ ಪರಿಗಣಿಸಿಲ್ಲ, ಮರು ದಿನವ ಬಾವಿಯಲ್ಲಿ ಶವ ಪತ್ತೆಯಾಗಿದ್ದು ರಾತ್ರಿ ಸರಿಯಾಗಿ ಹುಡುಕಾಡಿದ್ದರೆ ಬದುಕುಳಿಯುತ್ತಿದ್ದರು ಪೊಲೀಸರ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಆರೋಪಿಸಿದರು.

ಯುವತಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಬರ್ಬರವಾಗಿ ಕೊಲೆ ಮಾಡಿದ್ದು ಇದು ದೆಹಲಿಯ ನಿರ್ಭಯ ಪ್ರಕರಣದಂತೆ ಭೀಕರ ಪ್ರಕರಣವಾಗಿದೆ. ಇದೊಂದು ವಿಶಿಷ್ಟ, ಸೂಕ್ಷ್ಮ ಪ್ರಕರಣವೆಂದು ಪರಿಗಣಿಸಿ ಯಾವುದೇ ಒತ್ತಡಕ್ಕೆ ಒಳಗಾಗದೇ ತನಿಖೆ ಮಾಡಿ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಇತ್ತೀಚೆಗೆ ದೇವದುರ್ಗ ತಾಲೂಕಿನಲ್ಲಿ ಭೂಮಾನಂದ ಕೊಲೆ ಪ್ರಕರಣ, ಗಿಲ್ಲೆಸೂಗೂರು ಗ್ರಾಮದಲ್ಲಿ ನಡೆದ ಗ್ರಾಮ ಪಂಚಾಯಿತಿ ಮಾಜಿ

3 ನೇ ಪುಟಕ್ಕೆ

ಅಶ್ವಿನಿ ಅತ್ಯಾಚಾರ-ಕೊಲೆ: ಎಲ್ಲ ಆರೋಪಿಗಳ ಬಂಧನಕ್ಕೆ ಆಗ್ರಹ

ಪೊಲೀಸ್ ಇಲಾಖೆಯ ವೈಫಲ್ಯವೇ ಘಟನೆಗೆ ಕಾರಣ: ಬಲಗೈ ಜಾತಿಗಳ ಒಕ್ಕೂಟ



ರಾಯಚೂರು,ಆ.21-

ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದಲ್ಲಿ ದಲಿತ ಯುವತಿ ಅಶ್ವಿನಿ ಮೇಲೆ ನಡೆದಿರುವ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ಖಂಡಿಸಿ, ನ್ಯಾಯಕ್ಕಾಗಿ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಹೋರಾ ಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ (ರಿ.) ಜಿಲ್ಲಾ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ.

ಜಿಲ್ಲೆಯಲ್ಲಿದಲಿತ ಮಹಿಳೆಯರ ಮೇಲಿನ ದೌರ್ಜನ್ಯಗಳು ಪದೇ ಪದೇ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಪರಿಣಾಮಕಾರಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿರುವ ಸಂಘಟನೆ, ಇಂತಹ ಘಟನೆಗಳು ಮರುಕಳಿಸದಂತೆ ಗ್ರಾಮೀಣ ಪ್ರದೇಶಗಳಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ವಿಶೇಷ ಭದ್ರತಾ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದೆ.

3 ನೇ ಪುಟಕ್ಕೆ

ಅನಾಥ ಆಶ್ರಮದಲ್ಲಿ ಅರ್ಥಪೂರ್ಣವಾಗಿ ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕರ ಹುಟ್ಟುಹಬ್ಬ ಆಚರಣೆ

ದುಂದು ವೆಚ್ಚವಾಗದಂತೆ ಹಸಿದವರಿಗೆ ನೆರವಾಗಿದ್ದೇವೆ - ಜಿ.ಲೋಕರೆಡ್ಡಿ



ಸಿರವಾರ, ಆ.21-

ಹಟ್ಟು ಹಬ್ಬದ ಹೆಸರಿನಲ್ಲಿ ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ, ಮದ್ಯಪಾನ ಮೋಜು ಮಸ್ತಿ ಎಂದು ಮಾಡದೆ ಹಸಿದವರಿಗೆ ಅನ್ನ, ಅಕ್ಷರಜ್ಞಾನಕ್ಕೆ ನೇರವಾಗುತ್ತಿದೆವೆ ಎಂದು ಜೆಡಿಎಸ್ ಹಿರಿಯ ಮುಖಂಡ ವಾಣಿಜ್ಯೋದ್ಯಮಿ ಜಿ.ಲೋಕರೆಡ್ಡಿ ಹೇಳಿದರು ಮಾನ್ವಿ ಕ್ಷೇತ್ರದ ಮಾಜಿ ಶಾಸಕರಾದ ರಾಜಾ ವೆಂಕಟಪ್ಪನಾಯಕರು ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದ ವತಿಯಿಂದ ತಾಲೂಕಿನ ಮಾಡಗಿರಿ ಗ್ರಾಮದ ವಾತ್ಸಲ್ಯ ಸೇವಾ ಸಂಸ್ಥೆಯ ಅನಾಥಾಶ್ರಮದಲ್ಲಿರುವವರಿಗೆ ಆಹಾರ ಧಾನ್ಯದ ಕೀಟ್, ಹಣ್ಣು ಹಂಪಲು ಮತ್ತು ಕಾಪಿ ಪೇನ್ ಗಳನ್ನು ವಿತರಣೆ ಮಾಡಿ ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಯಿತು. ಈ ಕುರಿತು ಮಾತನಾಡಿದ ಜಿ.ಲೋಕರೆಡ್ಡಿ ಅವರು ಅನ್ನ ಅಕ್ಷರ ಅರಿವು ಪ್ರತಿಯೊಬ್ಬರಿಗೆ ದೊರೆಯಬೇಕು ಎಂದು ಲಿಂ.ಡಾ. ಶಿವಕುಮಾರ ಸ್ವಾಮಿಗಳು ಆಸೆ ಪಟ್ಟದರು ಅಂತಹ ಮಹಾನಿಯರು ತಿಳಿಸಿದ ಹಾದಿಯಲ್ಲಿ ನಡೆಯೊ ಣ ಎಂದು ಈ ರೀತಿ ಮಾಡಲಾಗಿದೆ. ರಾಜಾ ವೆಂಕಟಪ್ಪ ನಾಯಕರು ಶಾಸಕರಾಗಿದ್ದಾ ಗ ಅವರದೇ ಸರ್ಕಾರ ಇಲ್ಲದೆ ಇದರೂ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. 5 ವರ್ಷ. ರೈತರಿಗೆ ಎರಡು ಬೆಳೆಗಳಿಗೆ ನೀರು ಒದಗಿಸಿ ಕೊಡುವ ಮೂಲಕ ನೇರವಾಗಿದ್ದಾರೆ. ಇಂತವರು ಮುಂದಿನ 2028 ಚುನಾವಣೆಯಲ್ಲಿ ಮತ್ತೆ ಶಾಸಕರು ಆಗುವಂತೆ ಕ್ಷೇತ್ರದ ಮತದಾರರು ಆಶಿರ್ವಾದ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ವಿಜಯಲಕ್ಷ್ಮಿ ಆದೆಪ

3 ನೇ ಪುಟಕ್ಕೆ

ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಕಪ್ಪು ಟೀ-ಶರ್ಟ್ ಧರಿಸಿ ಬಿಜೆಪಿ ಪ್ರತಿಭಟನೆ



ಬೆಂಗಳೂರು, ಆ.21-

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಅಕ್ರಮ ಹಣ ವರ್ಗಾವಣೆ ಪ್ರಕರಣವನ್ನು ಮುಂದಿಟ್ಟುಕೊಂಡು ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಶುಕ್ರವಾರ ಬೆಂಗಳೂರಿನಲ್ಲಿ ತೀವ್ರ ಪ್ರತಿಭಟನೆ ನಡೆಸಿತು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಶಾಸಕರ ಭವನದ ಆವರಣದಲ್ಲಿರುವ ವಾಲ್ಮೀಕಿ ಪ್ರತಿಮೆ ಮುಂಭಾಗದಿಂದ ವಿಧಾನಸೌಧದತ್ತ ಪ್ರತಿಭಟನಾ ನಡಿಗೆ ನಡೆಸಿದರು.

ಕಪ್ಪು ಟೀ-ಶರ್ಟ್ ಧರಿಸಿದ್ದ ಬಿಜೆಪಿ ನಾಯಕರು, ನಾಗೇಂದ್ರ ರಾಜೀನಾಮೆ ನೀಡಬೇಕು ಎಂಬ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸಿದರು. ಶಾಸಕರ ಭವನದ ಪ್ರವೇಶದ್ವಾರದ ಬಳಿ ಪೊಲೀಸರು ತಡೆ ಹಾಕಲು ಮುಂದಾದರೂ, ಪ್ರತಿಭಟನಾಕಾರರು ಮುಂದುವರಿದು ವಿಧಾನಸೌಧದ ಆವರಣ ಪ್ರವೇಶಿಸಿದರು.

ಬಳಿಕ ವಿಧಾನಸಭೆಯ ಪ್ರವೇಶದ್ವಾರದ ಬಳಿ ಮಾರ್ಷಲ್‌ಗಳು ಕಪ್ಪು ಟೀ-ಶರ್ಟ್ ಧರಿಸಿದ್ದ ಶಾಸಕರನ್ನು ತಡೆಯಲು ಪ್ರಯತ್ನಿಸಿದರು. ಈ ವೇಳೆ ಮಾಜಿ ಸಚಿವ ಪ್ರಭು ಚೌಹಾಣ್ ಸೇರಿದಂತೆ ಬಿಜೆಪಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿ, ಮಾರ್ಷಲ್‌ಗಳೊಂದಿಗೆ ವಾಗ್ವಾದ ನಡೆಸಿದರು. ನಂತರ ಬಿಜೆಪಿ ಹಾಗೂ ಜೆಡಿಎಸ್ ಶಾಸಕರು ಒಟ್ಟಾಗಿ ವಿಧಾನಸಭೆಯೊಳಗೆ ಪ್ರವೇಶಿಸಿದರು.

ಸದನದಲ್ಲೂ ಮತ್ತು ಹೊರಗೂ ಈ ವಿಷಯವಾಗಿ ಪ್ರತಿಭಟನೆ ಮುಂದುವರಿದಿದ್ದು, ಸಚಿವ ನಾಗೇಂದ್ರ ರಾಜೀನಾಮೆ ನೀಡುವವರೆಗೂ ಹೋರಾಟ ಬಿಡುವುದಿಲ್ಲ ಎಂದು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಎಚ್ಚರಿಕೆ ನೀಡಿದ್ದಾರೆ.

ಎಸ್‌ಟಿ ವರ್ಗಕ್ಕೆ ಅಪಮಾನ

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಆರ್. ಅಶೋಕ್, ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರಿಸಿಕೊಂಡಿರುವುದು ಪರಿಶಿಷ್ಟ ಪಂಗಡ ಸಮುದಾಯಕ್ಕೆ ಮಾಡಿರುವ ಅಪಮಾನ ಎಂದು ಆರೋಪಿಸಿದರು.

ವಾಲ್ಮೀಕಿ ನಿಗಮದ ಹಣ ವರ್ಗಾವಣೆ ಪ್ರಕರಣದಲ್ಲಿ ನಿಗಮದ ಅಧಿಕಾರಿ ಪಿ. ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡಿದ್ದು, ಅವರು ಬರೆದಿದ್ದ ಡೆತ್‌ನೋಟ್‌ನಲ್ಲಿ ಸಚಿವರ ಮೌಖಿಕ ಸೂಚನೆಯ ಮೇರೆಗೆ ಹಣ ವರ್ಗಾವಣೆ ಮಾಡಲಾಗಿದೆ ಎಂದು ಉಲ್ಲೇಖಿಸಲಾಗಿದೆ ಎಂದರು.


ಡೆತ್‌ನೋಟ್ ಪ್ರಕರಣದ ಪ್ರಮುಖ ಸಾಕ್ಷ್ಯವಾಗಿದ್ದು, ಹಣ ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳು ಹಾಗೂ ಯೂನಿಯನ್ ಬ್ಯಾಂಕ್‌ನ ಚೆಕ್‌ಗಳು ಲಭ್ಯವಿವೆ ಎಂದು ಅಶೋಕ್ ಹೇಳಿದರು.ಯಾವ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂಬುದಕ್ಕೂ ದಾಖಲೆಗಳಿವೆ. ಹೀಗಾಗಿ ಪ್ರಕರಣದ ವಿಚಾರದಲ್ಲಿ ಅಂಗೈ ಹುಣ್ಣಿಗೆ ಕನ್ನಡಿ ಬೇಕಿಲ್ಲ ಎಂದು ಅವರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ವಾಲ್ಮೀಕಿ ನಿಗಮದ ಹಣ ಚುನಾವಣಾ ಉದ್ದೇಶಗಳಿಗೆ ಬಳಕೆಯಾಗಿದೆ ಎಂದು ಆರೋಪಿಸಿದ ಅಶೋಕ್, ಹಣ ರಾಹುಲ್ ಗಾಂಧಿ ಅವರ ಜೇಬಿಗೆ ಹೋಗಿದೆ ಹಾಗೂ ಚುನಾವಣೆಗೆ ಬಳಸಲಾಗಿದೆ ಎಂದು ಆರೋಪಿಸಿದರು. ವಾಲ್ಮೀಕಿ ನಿಗಮದ ಹಣ ದಲಿತರ ಕಲ್ಯಾಣಕ್ಕೆ ಬಳಕೆಯಾಗಬೇಕಿತ್ತು. ಆದರೆ, ಡೆತ್‌ನೋಟ್ ಮತ್ತು ಯೂನಿಯನ್ ಬ್ಯಾಂಕ್‌ನ ಚೆಕ್‌ಗಳ ಪ್ರಮುಖ ದಾಖಲೆಗಳ ಪ್ರಕಾರ ನಿಗಮದ ಹಣವನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳಿದರು.

ಈ ಹಗರಣದ ಹಣ ಕಾಂಗ್ರೆಸ್ ನಾಯಕರ ಚುನಾವಣಾ ಖರ್ಚಿಗೆ ಬಳಕೆಯಾಗಿದೆ ಎಂದು ಅವರು ವಾಗ್ದಾಳಿ ನಡೆಸಿದರು.ಕಾಂಗ್ರೆಸ್ ಕೂಡ ಪ್ರತಿಭಟನೆ ನಡೆಸುತ್ತಿರುವುದನ್ನು ಉಲ್ಲೇಖಿಸಿದ ಅಶೋಕ್, ಬಿಜೆಪಿ ನಡೆಸುತ್ತಿರುವ ಹೋರಾಟದ ಬಿಸಿ ಆಡಳಿತಾರೂಢ ಕಾಂಗ್ರೆಸ್‌ಗೆ ತಟ್ಟಿದೆ ಎಂದು ಲೇವಡಿ ಮಾಡಿದರು. ಮುಖ್ಯಮಂತ್ರಿ ಸೇರಿದಂತೆ ಕಾಂಗ್ರೆಸ್ ನಾಯಕರು

3 ನೇ ಪುಟಕ್ಕೆ

ಮಾಸಾಶನ ಪ್ರಮಾಣ ಪತ್ರಗಳು ಫಲಾನುಭವಿಗಳ ಮನೆಗೆ ತಲುಪಿಸುವಂತೆ ಆಗ್ರಹ



ಚಿತ್ತಾಪುರ,ಆ.21-

ಅಂಗವಿಕಲ, ಹಿರಿಯ ನಾಗರಿಕರ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮನಸ್ವಿನಿ ಹಾಗೂ ರಾಷ್ಟ್ರೀಯ ಭದ್ರತಾ ಯೋಜನೆಯ ಮಾಸಾಶನ ಮಂಜೂರಾತಿ ಪ್ರಮಾಣ ಪತ್ರಗಳನ್ನು ಫಲಾನುಭವಿಗಳ ಮನೆಗೆ ನೇರವಾಗಿ ತಲುಪಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ದೈಹಿಕ ಮತ್ತು ಮಾನಸಿಕ ಅಂಗವಿಕಲರ ವಿವಿಧೋದ್ದೇಶ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಮಹಮ್ಮದ್ ಇಬ್ರಾಹಿಂ ಅವರ ನೇತೃತ್ವದಲ್ಲಿ ತಹಶೀಲ್ದಾರ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಸಾರ್ವಜನಿಕರಿಗೆ ಕಚೇರಿ ಅಲೆದಾಟ ತಪ್ಪಿಸುವುದು ಮತ್ತು ಸೇವೆಗಳನ್ನು ಸುಲಭವಾಗಿ ನೀಡುವ ಉದ್ದೇಶದಿಂದ ಮನೆ ಬಾಗಿಲಿಗೆ ಜಾತಿ ಹಾಗೂ ಆದಾಯ ಮತ್ತು ನಿವಾಸಿ ಪ್ರಮಾಣ ಪತ್ರಗಳನ್ನು ತಲುಪಿಸುವ ಮಹಾತ್ವಾಕಾಂಕ್ಷಿ ಅಭಿಯಾನವನ್ನು ಸರ್ಕಾರ ಜಾರಿಗೆ ತಂದಿರುವುದು ಸ್ವಾಗತಾರ್ಹ, ಅದರಂತೆ ಅಂಗವಿಕಲ, ಹಿರಿಯ ನಾಗರಿಕರ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಮನಸ್ವಿನಿ ಹಾಗೂ ರಾಷ್ಟ್ರೀಯ ಭದ್ರತಾ ಯೋಜನೆಯ ಮಾಸಾಶನ ಮಂಜೂರಾತಿ ಪ್ರಮಾಣ ಪತ್ರಗಳನ್ನು ಸಹ ಫಲಾನುಭವಿಗಳ ಮನೆಗೆ ನೇರವಾಗಿ ತಲುಪಿಸುವ ಕ್ರಮ ಕೈಗೊಳ್ಳುವ ಮೂಲಕ ಅನಕೂಲ ಮಾಡಿಕೊಡಬೇಕು ಎಂದು ಹೇಳಿದರು.

ಅಂಗವಿಕಲರು ಹಾಗೂ ಹಿರಿಯ ನಾಗರಿಕರು ತಮ್ಮ ಮಾಸಾಶನಕ್ಕಾಗಿ ತಹಶೀಲ್ ಕಚೇರಿಗೆ ಅಲೆದಾಡುತ್ತಿದ್ದಾರೆ. ಅಂಗವಿಕಲರು ಹಾಗೂ ಹಿರಿಯ ನಾಗರಿಕರು ತಾಲೂಕು ಕಚೇರಿಗೆ ಹೋಗಿಬರಲು ತುಂಬಾ ತೊಂದರೆಯನ್ನು ಹಾಗೂ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇವರು ಪಡುತ್ತಿರುವ ಕಷ್ಟ ಹಾಗೂ ನರಕಯಾತನೆ ನೋವನ್ನು ಅರಿತುಕೊಂಡು ಕೂಡಲೇ ಸರ್ಕಾರ ಅವರಿಗೆ ಅಲೆದಾಡುವುದನ್ನು ತಪ್ಪಿಸಿ ಅವರ ದೈಹಿಕ ಹಾಗೂ ವಯಸ್ಸಿನ ಮೀತಿಯನ್ನು ಪರಿಗಣಿಸಿ ಮನೆ ಬಾಗಿಲಿಗೆ ಅಂಗವಿಕಲರ ಹಾಗೂ ಸಂಧ್ಯಾ ಸುರಕ್ಷಾ ಸೇರಿದಂತೆ ವಿವಿಧ ಮಾಸಾಶನ ಮಂಜೂರಾತಿ ಪ್ರಮಾಣ ಪತ್ರಗಳನ್ನು ತಲುಪಿಸುವ ಅಭಿಯಾನ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಈಗಾಗಲೇ ಆದಾಯದ ಮಿತಿ ನೆಪದಲ್ಲಿ ಅನೇಕರ ಮಾಸಾಶನ ಪ್ರಮಾಣ ಪತ್ರಗಳು ರದ್ದುಗೊಂಡಿವೆ. ಇದರಿಂದ ಅನೇಕರು ನಿತ್ಯ ತಮ್ಮ ಪ್ರಮಾಣ ಪತ್ರಗಳು ಹಾಗೂ ದಾಖಲೆಗಳನ್ನು ಹಿಡಿದುಕೊಂಡು ತಹಶೀಲ್ ಕಚೇರಿಗೆ ಅಲೆದಾಡುತ್ತಿದ್ದಾರೆ. ತಿಂಗಳ ಮಾಸಾಶನದ ಮೇಲೆ ತಮ್ಮ ಉಪ ಜೀವನ ನಡೆಸುತ್ತಿರುವ ಅಂಗವಿಕಲರಿಗೆ, ಹಿರಿಯ ನಾಗರಿಕರಿಗೆ, ವಿಧವೆಯರಿಗೆ ಈಗ ಏಕಾಏಕಿ ಮಾಸಾಶನ ಸ್ಥಗಿತೊಂಡಿದ್ದರಿಂದ ಅವರ ಜೀವನ ದುಸ್ತರವಾಗಿದೆ. ಹೀಗಾಗಿ ಸರ್ಕಾರದ ಮಾಸಾಶನ ಪಡೆಯುವ ಫಲಾನುಭವಿಗಳಿಗೆ ಆದಾಯದ ಮಿತಿಯಿಂದ ವಿನಾಯಿತಿ ನೀಡಬೇಕು. ಅವರಿಗೆ ಆದಾಯವಿದ್ದರೆ ಸರ್ಕಾರದ ಮಾಸಾಶನಕ್ಕೆಗೆ ಅರ್ಜಿ ಹಾಕುತ್ತಾರೆ ಹಾಗೂ ಪ್ರತಿ ತಿಂಗಳ ಮಾಸಾಶನಕ್ಕೆಗೆ ಕಾಯುತ್ತಿರುತ್ತಾರೆ ಎಂಬುವ ಪ್ರಶ್ನೆ ಬರಲಿದೆ. ಆದ್ದರಿಂದ ಸರ್ಕಾರ ಈ ಕುರಿತು ಸ್ವಲ್ಪ ಮುತುವರ್ಜಿ ವಹಿಸುವ ಮೂಲಕ ವಿವಿಧ ಯೋಜನೆಗಳ ಮಾಸಾಶನ ಪಡೆಯುವ ಫಲಾನುಭವಿಗಳ ಹಿತದೃಷ್ಟಿಯಿಂದ ಜಾತಿ ಆದಾಯ ಪ್ರಮಾಣ ಪತ್ರಗಳು ಮನೆ ಬಾಗಿಲಿಗೆ ತಲುಪಿಸಿದಂತೆ ಅಂಗವಿಕಲ, ಸಂಧ್ಯಾ ಸುರಕ್ಷೆ ಸೇರಿದಂತೆ ವಿವಿಧ ಯೋಜನೆಗಳ ಮಾಸಾಶನ ಪ್ರಮಾಣ ಪತ್ರಗಳನ್ನು ಸಹ ಮನೆ ಬಾಗಿಲಿಗೆ ತಲುಪಿಸಬೇಕು ಎಂದು ಒತ್ತಾಯಿಸಿದರು.

ಮಾಸಾಶನ ಪ್ರತಿ ತಿಂಗಳು ದಿನಾಂಕ 1ರಂದು ಫಲಾನುಭವಿಗಳ ಬ್ಯಾಂಕ್ ಅಥವಾ ಅಂಚೆ ಖಾತೆಗೆ ಜಮೆ ಮಾಡಬೇಕು, ಅಂಗವಿಕಲ, ಹಿರಿಯ ನಾಗರಿಕ ಸೇರಿದಂತೆ ಇತರೆ ಯೋಜನೆಗಳ ಮಾಸಾಶನ ಪಡೆಯುವ ಫಲಾನುಭವಿಗಳು ಅಲೆದಾಡುವುದನ್ನು ತಪ್ಪಿಸಬೇಕು, ಅಂಗವಿಕಲ ಹಾಗೂ ಹಿರಿಯ ನಾಗರಿಕರಿಗಾಗಿಯೇ ಪ್ರತ್ಯೇಕ ಕೌಂಟರ್ ಪ್ರಾರಂಭ ಮಾಡಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಿವಮ್ಮ ಸಾತನೂರು, ಲಕ್ಷ್ಮೀ ಸಿದ್ದಣ್ಣ, ಜಾಹೀದಾಬೇಗಂ, ಶರಣಪ್ಪ ಬಾಹರಪೇಟ್, ಜಗದೇವಪ್ಪ ಭಾಗೋಡಿ, ಅಬ್ದುಲ್ ಖಾದರ್, ಸಿದ್ದಪ್ಪ ನೆಡಿಗೇರಿ, ಮಲ್ಲಪ್ಪ ಸಾತನೂರು, ಮಂಜೂರು ಸಾಬ್, ಭೀಮರಾಯ ಬಾಹರಪೇಟ್, ಮಹೇಬೂಬ್ ಸಾಬ್, ಸಿದ್ದಣ್ಣ ಬಾಹರಪೇಟ್, ಮೊಗಲಪ್ಪ ಕುಂಬಾರ, ಗಂಗಮ್ಮ ಜಡಿ, ಮಲ್ಲಿನಾಥ ಪಾಟೀಲ, ಸಾಬಣ್ಣ ನಾಲವಾರ, ಕಲ್ಯಾಣಿ ಬಾಹರಪೇಟ್, ಚಂದ್ರಕಾಂತ ಬೆಲ್ಲದ, ಮಹಾದೇವಿ ಸಾತನೂರು, ದೇವಿಂದ್ರಪ್ಪ ದಿಗ್ಗಾಂವ, ವಿಜಯಮ್ಮ ಕಾಶಿ, ಹೊನ್ನಮ್ಮ ಬಾಹರಪೇಟ್, ಲಕ್ಷ್ಮೀಕಾಂತ ಚಿತ್ತಾಪುರ, ಮಹಾದೇವಮ್ಮ ದೊಡ್ಡಮನಿ ಸೇರಿದಂತೆ ಇತರರು ಇದ್ದರು.

ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ಧೀಕರಣ ಖಂಡಿಸಿ ಪ್ರತಿಭಟನೆ



ಕಲಬುರಗಿ,ಆ.21-

ಉತ್ತರಾಖಂಡದ ಹಲ್ವಾನಿಯ ರಾಮಲೀಲಾ ಮೈದಾನದಲ್ಲಿ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಗಂಗಾಜಲ ಸಿಂಪಡಿಸಿ ಶುದ್ಧೀಕರಿಸಿದ ಘಟನೆ ಖಂಡಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಕ್ರಾಂತಿಕಾರಿ) ವತಿಯಿಂದ ನಗರದ ಜಗತ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಮಾತನಾಡಿದ ಸಂಘಟನೆಯ ರಾಜ್ಯ ಸಂಚಾಲಕ ಅರ್ಜುನ ಭದ್ರೆ, ಮಲ್ಲಿಕಾರ್ಜುನ ಖರ್ಗೆ ಅವರು ಆ.8ರಂದು ಉತ್ತರಾಖಂಡದ ಹಲ್ವಾನಿಯ ರಾಮಲೀಲಾ ಮೈದಾನದಲ್ಲಿ ಸಭೆ ನಡೆಸಿದ ಸ್ಥಳವನ್ನು ಬಿಜೆಪಿ, ಆರ್‌ಎಸ್‌ಎಸ್ ಹಾಗೂ ಶ್ರೀರಾಮ ಸೇನಾ ಧರ್ಮಾರ್ಥ ಸೇವಾ ನ್ಯಾಸದ ಮುಖಂಡರು ಗಂಗಾಜಲ ಸಿಂಪಡಿಸಿ ಶುದ್ಧೀಕರಿಸಿರುವುದು ಅಸ್ಪೃಶ್ಯತೆ ಆಚರಣೆಯ ಪ್ರತೀಕವಾಗಿದೆ ಎಂದು ಆರೋಪಿಸಿದರು.

ದೇಶದ ಹಿರಿಯ ರಾಜಕಾರಣಿ, ದಲಿತ ಸಮುದಾಯದ ಗೌರವದ ಪ್ರತೀಕವಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರ ಭಾಷಣ ಮಾಡಿದ ಸ್ಥಳವನ್ನು ಶುದ್ಧೀಕರಿಸುವ ಮೂಲಕ ಇಡೀ ದಲಿತ ಸಮುದಾಯಕ್ಕೆ ಅವಮಾನ ಮಾಡಲಾಗಿದೆ. ಇಂತಹ ಕೃತ್ಯವು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದು, ಅಸ್ಪೃಶ್ಯತೆ ನಿರ್ಮೂಲನೆಗಾಗಿ ನಡೆದ ಹೋರಾಟಗಳಿಗೆ ಹಿನ್ನಡೆಯಾಗಿದೆ ಎಂದು ಹೇಳಿದರು.

ಭಾರತೀಯ ಸಂವಿಧಾನದ ಅನುಚ್ಛೇದ 17 ಅಸ್ಪೃಶ್ಯತೆಯನ್ನು ನಿಷೇಧಿಸಿದೆ. ಅಸ್ಪೃಶ್ಯತೆ ಅಥವಾ ಜಾತಿ ಆಧಾರಿತ ತಾರತಮ್ಯವನ್ನು ಯಾವುದೇ ರೂಪದಲ್ಲೂ ಸಹಿಸಬಾರದು. ಇಂತಹ ಘಟನೆಗಳಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಸಂವಿಧಾನದ ಆಶಯಗಳನ್ನು ರಕ್ಷಿಸಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಲ್ಲಿಕಾರ್ಜುನ ಕ್ರಾಂತಿ, ಮಹಾಂತೇಶ ಬಡದಾಳ, ಮಲ್ಲಿಕಾರ್ಜುನ ಖನ್ನಾ, ಮಹೇಶ್ ಕೋಕಿಲೆ, ಸಾಯಬಣ್ಣ ಕೊಟನೂರ, ಆರ್.ಕೆ. ಹುಡುಗಿ, ದತ್ತಾತ್ರೇಯ ಇಕ್ಕಲಕಿ, ಲಕ್ಷ್ಮಣ ದಸ್ತಿ, ಮಹಾಂತೇಶ ನವಕಲ, ಅಜೀಜ್ ಐಕೂರ, ಸಿದ್ದಣ್ಣ, ಸೂರ್ಯಕಾಂತ ಆಜಾದಪುರ, ರಾಜಕುಮಾರ್, ರಾಮಣ್ಣ ಸೇರಿದಂತೆ ಸಂಘಟನೆಯ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಡಿ. ದೇವರಾಜ್ ಅರಸು ಸಾಮಾಜಿಕ ಬದಲಾವಣೆಯ ಹರಿಕಾರ : ಎಸ್‌ಪಿ ಪ್ರದೀಪ್ ಗುಂಟಿ



ಬೀದರ್,ಆ.21-

ಡಿ. ದೇವರಾಜ್ ಅರಸು ಅವರು ರಾಜ್ಯ ಕಂಡ ಅಪರೂಪದ ಮುತ್ಸದ್ದಿ ನಾಯಕ. ಉಳುವವನೇ ಭೂಮಿಯ ಒಡೆಯ ಕಾಯ್ದೆ ಹಾಗೂ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಮತ್ತು ರಾಜಕೀಯ ಮೀಸಲಾತಿ ಜಾರಿಗೆ ತರುವ ಮೂಲಕ ಅವರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಬಣ್ಣಿಸಿದರು.

ನಗರದ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಗುರುವಾರ ಆಯೋಜಿಸಲಾಗಿದ್ದ ಡಿ. ದೇವರಾಜು ಅರಸು ಅವರ 111ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಅರಸು ಅವರ ಕ್ರಾಂತಿಕಾರಿ ನಿರ್ಧಾರಗಳು ಹಾಗೂ ಧೀಮಂತ ವ್ಯಕ್ತಿತ್ವವನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕಿದೆ ಎಂದು ಕರೆ ನೀಡಿದ ಅವರು, ದೇವರಾಜ್ ಅರಸು ಅವರು ಕೇವಲ ಅಧಿಕಾರ ನಡೆಸಿದ ನಾಯಕರಲ್ಲ, ಬದಲಿಗೆ ಸಾಮಾಜಿಕ ಬದಲಾವಣೆಯ ಹರಿಕಾರರಾಗಿದ್ದರು. ಅವರು ಜಾರಿಗೆ ತಂದ ಶೋಷಿತ ಹಾಗೂ ವಂಚಿತ ಸಮುದಾಯಗಳ ಸಬಲೀಕರಣ ಯೋಜನೆಗಳು ಇಂದು ಇಡೀ ದೇಶಕ್ಕೇ ಮಾದರಿಯಾಗಿವೆ. ಅವರಲ್ಲಿದ್ದ ದೂರದೃಷ್ಟಿ, ಬದ್ಧತೆ ಮತ್ತು ದಿಟ್ಟ ನಿರ್ಧಾರ ತಳೆಯುವ ಸಾಮರ್ಥ್ಯವು ಪ್ರತಿಯೊಬ್ಬ ಸಾರ್ವಜನಿಕ ಸೇವಕರಿಗೂ ಪ್ರೇರಣೆಯಾಗಿದೆ ಎಂದರು.

ದೇವರಾಜ್ ಅರಸು ಅವರ ಹಾದಿಯಲ್ಲಿ ಸಾಗುವುದು ಮತ್ತು ಅವರು ತೋರಿದ ಸಾಮಾಜಿಕ ಸಮಾನತೆಯ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ನಾವು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ. ಯುವಕರು ಇಂತಹ ಮಹಾನ್ ನಾಯಕರ ಆದರ್ಶಗಳನ್ನು ಓದಿ ತಿಳಿದುಕೊಳ್ಳುವುದರ ಜೊತೆಗೆ, ಸಮಾಜ ಕಲ್ಯಾಣಕ್ಕಾಗಿ ಶ್ರಮಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಅವರು ಪ್ರೇರೇಪಿಸಿದರು.

ಮಹಾನಗರ ಪಾಲಿಕೆಯ ಆಯುಕ್ತ ಮುಕುಲ್ ಜೈನ್ ಅವರು ಮಾತನಾಡಿ, ಸಾಮಾಜಿಕ ನ್ಯಾಯದ ಹರಿಕಾರರಾದ ದೇವರಾಜ್ ಅರಸು ಅವರ ಚಿಂತನೆಗಳು ಮತ್ತು ದೂರದೃಷ್ಟಿಯ ಆಡಳಿತ ವೈಖರಿ ಸದಾ ಸ್ಮರಣೀಯವಾಗಿದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಸುರೇಖಾ ಅವರು ಮಾತನಾಡಿ, ಅರಸು ಅವರು ಜಾರಿಗೆ ತಂದ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಸುಧಾರಣೆಗಳು ಪ್ರತಿಯೊಂದು ಶೋಷಿತ ವರ್ಗವನ್ನು ತಲುಪಿ, ಸಮಾಜದ ಸಬಲೀಕರಣಕ್ಕೆ ಬಲವಾದ ತಡಿಪಾಯ ಹಾಕಿಕೊಟ್ಟವು. ಕಾನೂನುಗಳನ್ನು ರೂಪಿಸುವುದಷ್ಟೇ ಅಲ್ಲದೆ, ಅವುಗಳನ್ನು ತಳಮಟ್ಟದ ಜನರಿಗೆ ತಲುಪಿಸುವಲ್ಲಿ ಅವರು ತೋರಿದ ಧೈರ್ಯ ಹಾಗೂ ಬದ್ಧತೆ ಅಭೂತಪೂರ್ವವಾದದ್ದು. ಅವರ ಆದರ್ಶಗಳನ್ನು ಅಧಿಕಾರ ವ್ಯವಸ್ಥೆ ಹಾಗೂ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಯುವಜನರು ನಶಾಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಬೇಕು : ಶೈನಿ ಗುಂಟಿ



ಔರಾದ್,ಆ.21-

ವ್ಯಸನದಿಂದ ವ್ಯಕ್ತಿಯ ಬದುಕಿನ ಜೊತೆಗೆ ಇಡೀ ಕುಟುಂಬದ ನೆಮ್ಮದಿ ಹಾಳಾಗುತ್ತದೆ. ಹಾಗೆಯೇ ಭವಿಷ್ಯವನ್ನೇ ನಾಶಪಡಿಸುತ್ತದೆ. ಯುವಜನರು ವ್ಯಸನದ ಅಪಾಯ ಅರಿತು ಅದರಿಂದ ದೂರವಿದ್ದು, ನಶಾಮುಕ್ತ ಸಮಾಜ ನಿರ್ಮಾಣಕ್ಕೆ ಸಂಕಲ್ಪ ಮಾಡಬೇಕು ಎಂದು ಅಕ್ಕಪಡೆಯ ರಾಜ್ಯ ಸಂಯೋಜಕಿ ಶೈನಿ ಗುಂಟಿ ಅವರು ಆಗ್ರಹಿಸಿದರು.

ಪಟ್ಟಣದ ಅಮರೇಶ್ವರ್ ಕಾಲೇಜಿನಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ 10 ಕೋಟಿ ನಶಾಮುಕ್ತಿ ಪ್ರತಿಜ್ಞೆ ಮಹಾ ಅಭಿಯಾನದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನವು ಭವಿಷ್ಯ ರೂಪಿಸಿಕೊಳ್ಳುವ ಅಮೂಲ್ಯ ಸಮಯವಾಗಿದೆ. ಈ ಹಂತದಲ್ಲಿ ವ್ಯಸನಕ್ಕೆ ಬಲಿಯಾದರೆ ಶಿಕ್ಷಣ, ಆರೋಗ್ಯ, ಸಂಬಂಧಗಳು ಹಾಗೂ ಜೀವನದ ಗುರಿ ಕೈತಪ್ಪುವ ಸಾಧ್ಯತೆ ಇದೆ. ಹೀಗಾಗಿ ವಿದ್ಯಾರ್ಥಿಗಳು ಯಾವುದೇ ರೀತಿಯ ವ್ಯಸನಕ್ಕೆ ಅವಕಾಶ ನೀಡದೆ, ಸ್ಪಷ್ಟ ಗುರಿಯೊಂದಿಗೆ ನಿರಂತರ ಪರಿಶ್ರಮಿಸಬೇಕು ಎಂದರು.

ವ್ಯಸನದಿಂದ ದೂರವಿರುವುದು ಕೇವಲ ವೈಯಕ್ತಿಕ ನಿರ್ಧಾರವಲ್ಲ; ಅದು ಕುಟುಂಬದ ಭವಿಷ್ಯವನ್ನು ಉಳಿಸುವ ಸಂಕಲ್ಪವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ನಶಾಮುಕ್ತ ಜೀವನದ ಸಂದೇಶವನ್ನು ತನ್ನ ಸ್ನೇಹಿತರು, ಕುಟುಂಬ ಹಾಗೂ ಸಮಾಜಕ್ಕೆ ತಲುಪಿಸುವ ಮೂಲಕ ಅಭಿಯಾನದ ಉದ್ದೇಶ ಸಾರ್ಥಕಗೊಳಿಸಬೇಕು ಎಂದು ಅವರು ಸಲಹೆ ನೀಡಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಬಿ.ಕೆ. ಸುಹಾಸಿನಿ ಅವರು ಮಾತನಾಡಿ, ನಶಾಮುಕ್ತ ಸಮಾಜ ನಿರ್ಮಾಣದಲ್ಲಿ ಯುವಜನತೆಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಯುವಕರು ತಮ್ಮ ಶಕ್ತಿ ಮತ್ತು ಸಮಯವನ್ನು ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಸಮಾಜಮುಖಿ ಚಟುವಟಿಕೆಗಳಿಗೆ ಬಳಸಿಕೊಂಡರೆ ದೇಶದ ಭವಿಷ್ಯ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ನುಡಿದರು.

ತಹಸೀಲ್ದಾರ್ ಮಹೇಶ ಪಾಟೀಲ್ ಅವರು ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು. ಮಾದಕ ವಸ್ತುಗಳ ಸೇವನೆಯಿಂದ ವ್ಯಕ್ತಿಯ ಆರೋಗ್ಯದ ಜೊತೆಗೆ ಕುಟುಂಬದ ನೆಮ್ಮದಿ ಹಾಗೂ ಸಮಾಜದ ಸ್ವಾಸ್ಥ್ಯವೂ ಹಾಳಾಗುತ್ತದೆ. ಯುವಜನರು ದುಶ್ಚಟಗಳಿಂದ ದೂರವಿದ್ದು ಉತ್ತಮ ಜೀವನಶೈಲಿ ರೂಢಿಸಿಕೊಳ್ಳಬೇಕು. ವ್ಯಸನ ಮುಕ್ತಿಯ ಕುರಿತು ನಿರಂತರ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ತಾಪಂ ಇಒ ಕಿರಣ್ ಪಾಟೀಲ್, ಬಿಕೆ ಶಾಂತಾ, ಸಿಪಿಐ ರಘುವೀರಸಿಂಗ್ ಠಾಕೂರ್ ಪ್ರಕಾಶ್ ರಾಠೋಡ್, ಪಿಎಸ್‌ಐ ವಾಸಿಮ್ ಪಟೇಲ್, ಬಂಡೆಪ್ಪ ಕಂಟೆ, ರವಿಂದ್ರ ಮೀಸೆ, ಪತ್ರಕರ್ತ ಸಂಘದ ತಾಲೂಕಾಧ್ಯಕ್ಷ ಶಿವಾನಂದ್ ಮೊಕ್ತೆದಾರ್ ಅಕ್ಕಪಡೆಯ ಸಂಗೀತಾ, ರೇವಣ್ಣಯ್ಯ ಮಠ, ಅಶೋಕ್ ಶೆಂಬೆಳ್ಳಿ, ಅಂಬಾದಾಸ್ ನಳಗೆ, ಓಂಪ್ರಕಾಶ್ ದಡ್ಡೆ ಹಾಗೂ ಸಂಗಪ್ಪ ಘಾಟೆ ಇದ್ದರು.

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ



ಬೀದರ್,ಆ.21-

ತಾಲೂಕಿನ ಟಿ. ಮಿರ್ಜಾಪೂರ್ ಗ್ರಾಮದ ನಿವಾಸಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಪಿಐ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ವತಿಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ನಗರದ ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾದ ಪ್ರತಿಭಟನಾ ರ್‍ಯಾಲಿಯಲ್ಲಿ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗುತ್ತಾ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಬೀದರ್ ನಗರದಿಂದ ಸುಮಾರು 15 ರಿಂದ16 ಕಿ.ಮೀ. ದೂರದಲ್ಲಿರುವ ಟಿ. ಮಿರ್ಜಾಪೂರ್ ಗ್ರಾಮದಲ್ಲಿ ಸುಮಾರು 300 ಮನೆಗಳಿದ್ದು, ಗ್ರಾಮವು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿದೆ. ಗ್ರಾಮದ ಸುತ್ತಮುತ್ತ ಕಾಯ್ದಿಟ್ಟ ಅರಣ್ಯ ಪ್ರದೇಶ ಇರುವುದರಿಂದ ಜನರಿಗೆ ವಾಸಿಸಲು ಹಾಗೂ ಮನೆ ನಿರ್ಮಿಸಿಕೊಳ್ಳಲು ಜಾಗದ ಕೊರತೆ ಉಂಟಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಗ್ರಾಮಕ್ಕೆ ಹೊಂದಿಕೊಂಡಿರುವ ಸರ್ವೇ ನಂ.2ರಲ್ಲಿರುವ 36 ಎಕರೆ ಜಾಗದಲ್ಲಿ ಸಾಮಾಜಿಕ ಅರಣ್ಯ ನಿರ್ಮಾಣ ಮಾಡಲಾಗಿದೆ. ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮನೆ ನಿರ್ಮಾಣಕ್ಕೆ ಅಗತ್ಯವಾದ ನಿವೇಶನಗಳ ಕೊರತೆ ಎದುರಾಗಿದೆ. ಆದ್ದರಿಂದ, ಈ ಜಾಗದಲ್ಲಿ ಗ್ರಾಮದ ಅರ್ಹ ಜನರಿಗೆ ನಿವೇಶನ ಒದಗಿಸಬೇಕು ಎಂದು ಒತ್ತಾಯಿಸಲಾಗಿದೆ.

ಟಿ. ಮಿರ್ಜಾಪೂರ್ ಗ್ರಾಮದ ಸರಕಾರಿ ಭೂಮಿಯ ಸರ್ವೇ ನಂ. 2ರಲ್ಲಿರುವ 36 ಎಕರೆ ಜಾಗದಲ್ಲಿ 30/40 ಅಳತೆಯ ನಿವೇಶನಗಳನ್ನು ಗ್ರಾಮದ ಜನರಿಗೆ ನೀಡಬೇಕು. ಅದೇ ರೀತಿ ಬೆಳಕೇರಾ, ಬೇಮಳಖೇಡಾ, ಚಾಂಗಲೇರಾ, ಕಪಲಾಪೂರ್ (ಜೆ), ಹೊನ್ನಿಕೇರಿ ಹಾಗೂ ಅತಿವಾಳ್ ಗ್ರಾಮಗಳ ಬಗರ ಹುಕುಂ ಸಾಗುವಳಿದಾರರಿಗೆ ಸಿ ಫಾರಂ ನೀಡಲಾಗಿದ್ದು, ಅವರ ಜಮೀನುಗಳನ್ನು ಸಕ್ರಮಗೊಳಿಸಬೇಕು ಎಂದು ಆಗ್ರಹಿಸಲಾಗಿದೆ.

ಹಾಗೆಯೇ ಸಾಮಾಜಿಕ ಭದ್ರತಾ ಯೋಜನೆಗಳ ವಾರ್ಷಿಕ ಆದಾಯ ಮಿತಿಯನ್ನು 8 ಲಕ್ಷ ರೂ.ಗೆ ಹೆಚ್ಚಿಸಬೇಕು. ಹಿರಿಯ ನಾಗರಿಕರು, ವಿಕಲಚೇತನರು ಮತ್ತು ಇತರ ಅರ್ಹ ಫಲಾನುಭವಿಗಳಿಗೆ ತಡೆಹಿಡಿಯಲಾಗಿರುವ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ಎಐಕೆಎಸ್ ರಾಜ್ಯ ಉಪಾಧ್ಯಕ್ಷ ಬಾಬುರಾವ್ ಹೊನ್ನಾ, ಸಿಪಿಐ ಶಾಖಾ ಕಾರ್ಯದರ್ಶಿ ನನ್ನೇಸಾಬ್, ಸಿಪಿಐ ಜಿಲ್ಲಾ ಕಾರ್ಯದರ್ಶಿ ನಜೀರ್ ಅಹ್ಮದ್, ಸಹಾಯಕ ಕಾರ್ಯದರ್ಶಿ ಶಫಾಯತ್ ಅಲಿ, ರಾಜ್ಯ ಉಪಾಧ್ಯಕ್ಷ ಬಾಬುರಾವ ಹೊನ್ನಾ, ಪ್ರಭು ತಗಣಿಕರ್ ಮೌಲಾನಾ ಖುರೇಷಿ, ಶೀಲಾ ಸಾಗರ್‌ಬಸವರಾಜ್ ಪಾಟೀಲ್, ಜೈಶೀಲಕುಮಾರ್, ವೀರಶೆಟ್ಟಿ ವಟ್ಟಂಬೆ, ಘಾಳೆಪ್ಪಾ ಟಿ. ಮಿರ್ಜಾಪೂರ ಗ್ರಾಮದ ಮನ್ನೂ ರಮಿಯ್ಯಾ, ಭಾಗಮ್ಮ, ಖೈಸರ್‌ಬೀ, ಲಕ್ಷ್ಮೀ ಹಾಗೂ ಖಮರ್‌ಬೀ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಬುರಗಿ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಹುಮಹಾಜರ ಕುರಿತು ವಿಚಾರ ಸಂಕಿರಣ



ಕಲಬುರಗಿ,ಆ.21-

ಸಮಾಜದಲ್ಲಿ ಜಾತಿ ತಾರತಮ್ಯ ಮತ್ತಷ್ಟು ಹೆಚ್ಚಾಗುತ್ತಿದ್ದು, ಪ್ರಜ್ಞಾವಂತರು ಜಾತಿ ಅಳಿಸುತ್ತ ಸಾಮಾಜಿಕ ಸಾಮರಸ್ಯ ಬೆಳೆಸಬೇಕು ಎಂದು ಹಿರಿಯ ಸಾಹಿತಿ ಧರ್ಮಣ್ಣ ಎಚ್ ಧನ್ನಿ ಹೇಳಿದರು.

ನಗರದ ಕನ್ನಡ ಭವನದಲ್ಲಿ ಕರ್ನಾಟಕ ಸಮತಾ ಸೈನಿಕ ದಳ ಜಿಲ್ಲಾ ಘಟಕ ಏರ್ಪಡಿಸಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸಾಹು ಮಹಾರಾಜರ ಕುರಿತಾದ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ಮೀಸಲಾತಿಯ ಜನಕರಾದ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕೊಲ್ಹಾಪುರದ ಛತ್ರಪತಿ ಸಾಹು ಮಹಾರಾಜರ ಸಾಮಾಜಿಕ ನ್ಯಾಯದ ಕೊಡುಗೆಗಳು ಇಂದಿಗೂ ಕೂಡ ಪ್ರಸ್ತುತವಾಗಿವೆ. ಆದರೆ ಜಾತಿ ವ್ಯವಸ್ಥೆ ಹೆಚ್ಚುತ್ತಿರುವುದಕ್ಕೆ ಅವರು ಕಳವಳ ವ್ಯಕ್ತಪಡಿಸಿದರು.

ಪ್ರಾಧ್ಯಾಪಕಿ ಡಾ.ಪುಟ್ಟಮಣಿ ದೇವಿದಾಸ ಅವರು ಸಮಾರಂಭ ಉದ್ಘಾಟಿಸಿ ಮಾತನಾಡಿ, ಜಾತಿ ವ್ಯವಸ್ಥೆ ನಿರ್ಮೂಲನೆ, ದೇವದಾಸಿ ಪದ್ಧತಿ ನಿಷೇದ ಸೇರಿ ಅನೇಕ ಪ್ರಗತಿ ಪೂರಕ ಕಾರ್ಯ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು ಎಂದು ಅವರು ಸ್ಮರಿಸಿದರು. ಬುದ್ಧ ಬಸವ ಡಾ.ಅಂಬೇಡ್ಕರವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.

ಕರ್ನಾಟಕ ಸಮತಾ ಸೈನಿಕ ದಳದ ವಿಭಾಗೀಯ ಅಧ್ಯಕ್ಷ ಸಂಜೀವಕುಮಾರ ಟಿ ಮಾಲೆ ಅವರು ಅಧ್ಯಕ್ಷತೆ ವಹಿಸಿ, ಬಹುಜನ ನಾಯಕರ ತತ್ವಾದರ್ಶಗಳನ್ನು ಇಂದಿನ ಶೋಷಿತ ಸಮುದಾಯಕ್ಕೆ ಮುಟ್ಟಿಸಲು ಮುಂದಾಗಬೇಕು ಎಂದರು.

ಕರ್ನಾಟಕ ರಾಜ್ಯ ಎಸ್‌ಸಿ, ಎಸ್‌ಟಿ ಅಲೆಮಾರಿ ಬುಡಕಟ್ಟು ಮಹಾಸಭೆಯ ರಾಜ್ಯ ಉಪಾಧ್ಯಕ್ಷ ಅನೀಲಕುಮಾರ ಎಸ್. ಕಾಂಬಳೆ, ರಾಜ್ಯ ಗೌರವಾಧ್ಯಕ್ಷ ಶಂಕರ ಫಿರಂಗೆ, ಶಿವಾನಂದ ಎಸ್. ಸಾಗರ, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದ, ಗಾಯಕ ಸುಭಾಷ ಬನ್ನಬಟ್ಟಿ, ಸರ್ಕಾರಿ ಪ್ರೌಢಶಾಲೆ ಪಾಳಾ (ಬಿ)ಯ ಸಹ ಶಿಕ್ಷಕಿ ಡಾ. ಕಾವೇರಿ ಕುದಂಪುರೆ ಹಾಗೂ ಪಾಳಾ (ಬಿ). ಸ.ಹಿ.ಪ್ರಾ.ಶಾಲೆಯ ಸಹ ಶಿಕ್ಷಕಿ ಗೀತಾ ಭರಣಿ, ಬೀದರ್ ಜಿಲ್ಲಾಧ್ಯಕ್ಷ ಅಂಬಾದಾಸ ಸೋನಿ, ಬಸವೇಶ್ವರ ಆಸ್ಪತ್ರೆಯ ಸಿಬ್ಬಂದಿ ವಿಜಯಲಕ್ಷ್ಮೀ ಸೇರಿದಂತೆ ಇತರರಿದ್ದರು.

ಗಡಿ ಭಾಗದಲ್ಲಿ ಉದ್ಯೋಗ ಸೃಷ್ಟಿಸಿ ವಲಸೆ ತಡೆಯಿರಿ : ಜಿಲ್ಲಾ ಪಂಚಾಯತ್ ಸಿಇಒ ಡಾ.ಗೀರಿಶ್ ಬದೋಲೆ



ಔರಾದ್ ,ಆ.21-

ತೆಲಂಗಾಣ ಹಾಗೂ ಮಹಾರಾಷ್ಟ್ರ ಗಡಿಯಲ್ಲಿ ಕೂಲಿ ಕಾರ್ಮಿಕರು ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನು ತಡೆಯಲು ವಿಬಿ-ಜಿ ರಾಮ್ ಜಿ ಯೋಜನೆಯಡಿ ಹೆಚ್ಚು ಉದ್ಯೋಗ ಸೃಷ್ಟಿಸಿ ಕೂಲಿ ಕಾರ್ಮಿಕರಿಗೆ ಕೆಲಸ ನೀಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ದಿಲೀಪ್ ಬದೋಲೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಗಡಿ ಭಾಗದ ತಾಂಡಾಗಳಲ್ಲಿ ಪ್ರತಿನಿತ್ಯ ಹೆಚ್ಚಿನ ಸಂಖ್ಯೆಯ ಕೂಲಿ ಕಾರ್ಮಿಕರಿಗೆ ಕೆಲಸ ದೊರೆಯುವಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕು. ಗ್ರಾಮದಲ್ಲಿಯೇ ನಿರಂತರ ಉದ್ಯೋಗ ಲಭ್ಯವಾದರೆ ಕಾರ್ಮಿಕರ ವಲಸೆಯನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯವಾಗುತ್ತದೆ ಎಂದರು.

ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಹೆಚ್ಚಿನ ಸಮುದಾಯ ಕಾಮಗಾರಿಗಳನ್ನು ಗುರುತಿಸಿ ಅನುಷ್ಠಾನಗೊಳಿಸುವ ಮೂಲಕ ಹೆಚ್ಚು ಮಾನವ ದಿನಗಳನ್ನು ಸೃಜಿಸಬೇಕು. ಕಾಮಗಾರಿಗಳ ಬೇಡಿಕೆ ಇರುವ ಕಡೆ ತಕ್ಷಣ ಕೆಲಸ ಆರಂಭಿಸಿ ಕೂಲಿ ಕಾರ್ಮಿಕರಿಗೆ ನಿರಂತರ ಉದ್ಯೋಗ ಕಲ್ಪಿಸುವಂತೆ ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಜಯಪ್ರಕಾಶ್, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ್ ಪಾಟೀಲ್, ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಹಾಗೂ ಎಡಿಪಿಸಿ ದೀಪಕ್ ಕಡಿಮನಿ ಸೇರಿದಂತೆ ತಾಲೂಕಿನ ಎಲ್ಲ ಪಿಡಿಒಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ವೈಫಲ್ಯವೇ ಘಟನೆಗೆ ಕಾರಣ: ಬಲಗೈ ಜಾತಿಗಳ ಒಕ್ಕೂಟ

ಅಶ್ವಿನಿ ಪ್ರಕರಣದಲ್ಲಿ ಈಗಾಗಲೇ ಮೂವರು ಆರೋಪಿಗಳ ಬಂಧನವಾಗಿದ್ದರೂ ಅದು ಸಾಕಾಗುವುದಿಲ್ಲ. ಕೃತ್ಯದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಬೇಕು. ಯಾವುದೇ ಪ್ರಭಾವ ಅಥವಾ ಒತ್ತಡಕ್ಕೆ ಮಣಿಯದೆ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಾನೂನುಬದ್ಧ ಗರಿಷ್ಠ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒಕ್ಕೂಟ ಒತ್ತಾಯಿಸಿದೆ.

ಮೃತ ಅಶ್ವಿನಿಯ ಕುಟುಂಬಕ್ಕೆ ಸೂಕ್ತ ಪೊಲೀಸ್ ಭದ್ರತೆ, ಸರ್ಕಾರದ ಪರಿಹಾರ ಹಾಗೂ ಅರ್ಹತೆಗೆ ಅನುಗುಣವಾಗಿ ಸರ್ಕಾರಿ ಉದ್ಯೋಗ ಸೇರಿದಂತೆ ಅಗತ್ಯ ನೆರವು ಒದಗಿಸಬೇಕು. ಕುಟುಂಬಕ್ಕೆ ಯಾವುದೇ ರೀತಿಯ ಬೆದರಿಕೆ ಅಥವಾ ಒತ್ತಡ ಉಂಟಾಗದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

''ಒಬ್ಬ ದಲಿತ ಯುವತಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಗೆ ನ್ಯಾಯ ದೊರಕಿಸಿಕೊಳ್ಳಲು ಬೆಳಗ್ಗೆಯಿಂದ ಸಂಜೆವರೆಗೆ ಹೋರಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಆಡಳಿತ ವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಅಶ್ವಿನಿಗೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಯಲಿದೆ. ಇಂತಹ ಘಟನೆಗಳು ಮುಂದೆ ನಡೆಯದಂತೆ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಶಾಶ್ವತ ಕ್ರಮ ಕೈಗೊಳ್ಳಬೇಕು'' ಎಂದು ಸಂಘಟನೆ ಎಚ್ಚರಿಸಿದೆ.

ಒಕ್ಕೂಟದ ಜಿಲ್ಲಾಧ್ಯಕ್ಷ ಭೀಮಣ್ಣ ಮಂಚಾಲ ಮಾತನಾಡಿ, ''ಅಶ್ವಿನಿ ಮೇಲಿನ ಕೃತ್ಯ ಅತ್ಯಂತ ದುಃಖಕರ ಹಾಗೂ ಅವಮಾನಕರ ಘಟನೆ. ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನಿನಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈಗ ಬಂಧಿಸಿರುವವರ ಜೊತೆಗೆ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರನ್ನು ಬಂಧಿಸಬೇಕು. ಮೃತಳ ಕುಟುಂಬಕ್ಕೆ ಸೂಕ್ತ ಭದ್ರತೆ ಹಾಗೂ ಸರ್ಕಾರದ ಎಲ್ಲ ಕಾನೂನುಬದ್ಧ ನೆರವು ಒದಗಿಸಬೇಕು'' ಎಂದು ಒತ್ತಾಯಿಸಿದರು.

ಮಹಿಳಾ ಒಕ್ಕೂಟದ ಜಿಲ್ಲಾಧ್ಯಕ್ಷೆ ಅರ್ಚನಾ ಸುಂಕರಿ, ಮಲ್ಲೇಶ್ ಕೊಲುಮಿ ಖಜಾಂಚಿ ವಿಜಯ ಗಾರ್ಲೆ, ನಾಗರಾಜ (ತಿಕ್ಕಣ್ಣ), ವೆಂಕಟೇಶ ಆರೋಲಿಕರ್ ರವಿ ಕರ್ಲಾಪೂರ, ಪ್ರಧಾನ ಕಾರ್ಯದರ್ಶಿ ಎಂ. ಮಾರೆಪ್ಪ, ಬಿ.ಕೆ. ಬಾಬು, ಆರ್. ಬಸವರಾಜ, ಪ್ರಾಣೇಶ ಮಂಚಾಲ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಶ್ವಿನಿ ಪ್ರಕರಣದ ಕುರಿತು ಜಿಲ್ಲಾಧಿಕಾರಿ, ರಾಯಚೂರು ಹಾಗೂ ಬಳ್ಳಾರಿ ವಲಯದ ಐಜಿಪಿ ಅವರಿಗೆ ಮನವಿ ಸಲ್ಲಿಸಿ, ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗಿದೆ

ದಲಿತರ ನಾಲ್ಕು ಪ್ರಕರಣ ಗಂಭೀರವಾಗಿ ಪರಿಗಣಿಸಲು ಮನವಿ

ಅಧ್ಯಕ್ಷನ ಕೊಲೆ, ಬುಧವಾರವೇ ಲಿಂಗಸುಗೂರಿನ ಕರಡಕಲ್ ನಲ್ಲಿ ಉರುವಲು ಕಟ್ಟಿಗೆ ತರಲು ಹೋದ ದಲಿತ ಮಹಿಳೆಯ ಕೊಲೆಯಾಗಿದೆ. ಈ ನಾಲ್ಕು ಪ್ರಕರಣ ಪರಿಶಿಷ್ಟ ಜಾತಿಯ ಸಮುದಾಯಕ್ಕೆ ತೀವ್ರ ಆಘಾತ ಹಾಗೂ ಅಭದ್ರತೆ ಮೂಡಿಸುತ್ತಿದೆ. ಜಿಲ್ಲಾಡಳಿತ ಜಿಲ್ಲಾ ಪೊಲೀಸ್ ಇಲಾಖೆಯ ಆಡಳಿತದ ಮೇಲೆ ಗಂಭೀರ ಪ್ರಶ್ನೆ ಮೂಡುವಂತೆ ಮಾಡಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ದಲಿತರ ಮೇಲೆ ಅತ್ಯಾಚಾರ, ಕೊಲೆ,ಹಲ್ಲೆ,ದೌರ್ಜನ್ಯ ನಡೆಯುತ್ತಿದೆ. ತಿಂಗಳಿಗೊಮ್ಮೆ ಎಸ್ ಸಿ ಎಸ್ ಟಿ ಕುಂದುಕೊರತೆ ಸಭೆ ನಡೆಸುವುದು ಆದೇಶವಿದ್ದರೂ ಜಿಲ್ಲಾ ಪೊಲೀಸ್ ಇಲಾಖೆ ಯಿಂದ ಸಭೆ ನಡೆಸುತ್ತಿಲ್ಲ, ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ, ಗಾಂಜಾ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದು ಅಪರಾಧ ಚಟುವಟಿಕೆಗಳಿಗೆ ಆಸ್ಪದ ನೀಡುತ್ತಿದೆ ಎಂದರು.

ಹಿರಿಯ ಮುಖಂಡ ರವೀಂದ್ರನಾಥ ಪಟ್ಟಿ ಮಾತನಾಡಿ, ಹೊಕ್ರಾಣಿ ಯ ಯುವತಿಯ ಕೊಲೆ, ಲಿಂಗಸೂಗೂರು ಮಹಿಳೆಯ ಕೊಲೆ ಜಿಲ್ಲೆಯಲ್ಲಿ ಬೆಚ್ಚಿ ಬೀಳಿಸಿದೆ. ಮಾನವೀಯತೆ ಉಳ್ಳ ಎಲ್ಲರೂ ಖಂಡಿಸಬೇಕು. ಆದರೆ ತೀವ್ರ ತರಹದ ಖಂಡನೆ ವ್ಯಕ್ತವಾಗಿಲ್ಲ, ಬೇರೆ ರಾಜ್ಯದಲ್ಲಿ ಇದನ್ನು ರಾಷ್ಟ್ರ ಮಟ್ಟದ ಸುದ್ದಿ ಮಾಡಲಾಗುತ್ತಿತ್ತು ನಮ್ಮಲ್ಲಿ ಯಾಕೆ ಆಗಿಲ್ಲ ದಲಿತ ಸಕುದಾಯಗಳ ಜೀವಕ್ಕೆ ಬೆಲೆ ಇಲ್ವಾ ಎಂದು ಪ್ರಶ್ನಿಸಿದರು.

ಹೊಕ್ರಾಣಿಯ ದಲಿತ ಯುವತಿಯ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಯಾರ ಒತ್ತಡಕ್ಕೆ ಬಲಿಯಾಗದೇ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಭದ್ರತೆ ಒದಗಿಸಬೇಕು. ಕುಟುಂಬಕ್ಕೆ 50 ಲಕ್ಷ ಪರಿಹಾರ ಹಾಗೂ ಕುಟುಂಬಕ್ಕೆ ಸರ್ಕಾರಿ ಉದ್ಯೋಗ ನೀಡಬೇಕು. ಜಿಲ್ಲೆಯಲ್ಲಿ ನಡೆದ ನಾಲ್ಕು ಜನ ದಲಿತರ ಕೊಲೆಯನ್ನು ಗಂಭೀರವಾಗಿ ಪರಿಗಣಿಸಿ ಗೃಹ ಗಂಭೀರವಾಗಿ ಪರಿಗಣಿಸಿ ಸೂಕ್ತ ತನಿಖೆ ನಡೆಸಬೇಕು ಹಾಗೂ ಆರೋಪಿ ಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು. ಇಲ್ಲದಿದ್ದರೆ ಗೃಹ ಸಚಿವರ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಛಲವಾದಿ ಮಹಾಸಭಾದ ರಾಜ್ಯ ನಿರ್ದೇಶಕ ಎಂ.ವಸಂತ ಕುಮಾರ, ಶಿವಕುಮಾರ, ಶರಣಪ್ಪ ನಂದಿಹಾಳ, ನಿರುಪಾದಿ ಸಾಸುಲಮಾರಿ, ಚಿನ್ನರಾಯುಡು ಮತ್ತಿತರರು ಉಪಸ್ಥಿತರಿದ್ದರು.

ದುಂದು ವೆಚ್ಚವಾಗದಂತೆ ಹಸಿದವರಿಗೆ ನೆರವಾಗಿದ್ದೇವೆ - ಜಿ.ಲೋಕರೇಡ್ಡಿ

ಸಾಹುಕಾರ, ಗ್ಯಾನಪ್ಪ ಸೂಜಪ್ಪ, ದಾನಪ್ಪ, ರಂಜಿತ್, ಪರಮೇಶ ನಾಯ್ಕ್ , ಇಬ್ರಾಹಿಂ ಎಲ್ ಐ ಸಿ, ಸತ್ತರ್ ಸಾಬ್, ಲಕ್ಷ್ಮಣ,ವಾತ್ಸಲ್ಯ ಸೇವಾ ಸಂಸ್ಥೆಯ ಅಧ್ಯಕ್ಷ ವೀರಭದ್ರ, ಚಂ ದ್ರಶೇಖರ್ ಯಲ್ಲೇರಿ, ರಾಮಾ ಚಾರಿ, ಶರಣಗೌಡ, ಯಲ್ಲಪ್ಪ ದೊರೆ, ರಾಮು ಗಿಂಡಿ, ಸತೀಶ್, ಅರುಣ್ ಕುಮಾರ, ರಾಮು, ರವಿಕುಮಾರ್, ಮೌನೇಶ ಕರಿಬಿರ್ಲ್ಕರ್ ವಿನೋದ್ ಹಾಗೂ ಸಂತೋಷ ಗಿಂಡಿ ಸೇರಿದಂತೆ ರಾಜಾ ವೆಂಕಟಪ್ಪನಾಯಕರ ಅಭಿ ಮಾನಿಗಳು ಮತ್ತು ಬೆಂಬಲಿಗರು

ಹಂಪಯ್ಯ ನಾಯಕರಿಂದ ಸಂತ್ರಸ್ತ ಕುಟುಂಬಕ್ಕೆ ₹2 ಲಕ್ಷ ನೆರವು

ಅಶ್ವಿನಿ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲಿ.''ಅಶ್ವಿನಿ ಸಾವಿಗೆ ನ್ಯಾಯ ದೊರಕಬೇಕು. ಘಟನೆಗೆ ಕಾರಣರಾದವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ದೊರಕಬೇಕು. ಪೊಲೀಸ್ ಇಲಾಖೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು'' ಎಂದು ಅವರು ಒತ್ತಾಯಿಸಿದರು. ಚುಕ್ಕಿ ಶಿವಕುಮಾರ, ಮಲ್ಲೇಶ ಕೊಲುಮೆ ಇನ್ನಿತರರು ಇದರು

ರಾಜೀನಾಮೆಗೆ ಆಗ್ರಹಿಸಿ ಕಪ್ಪು ಟೀ-ಶರ್ಟ್ ಧರಿಸಿ ಬಿಜೆಪಿ ಪ್ರತಿಭಟನೆ

ಪ್ರತಿಭಟನೆ ನಡೆಸುತ್ತಿರುವುದು ಇದೇ ಕಾರಣಕ್ಕೆ ಎಂದು ಅವರು ವ್ಯಂಗ್ಯವಾಡಿದರು.

ಇದನ್ನು ಎಲ್ಲಾದರೂ ನೋಡಿದ್ದೀರಾ? ಎಂದು ಪ್ರಶ್ನಿಸಿದ ಅಶೋಕ್, ಬಿಜೆಪಿ ಹೋರಾಟದಿಂದ ಸರ್ಕಾರ ಒತ್ತಡಕ್ಕೆ ಸಿಲುಕಿದೆ ಎಂದು ಹೇಳಿದರು. ದಲಿತರ ಹಣ ಲೂಟಿ ಮಾಡುವಾಗ ದಲಿತರು ನೆನಪಾಗಲಿಲ್ಲವೇ? ಎಂದು ತರಾಟೆಗೆ ತೆಗೆದುಕೊಂಡರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ವಾಲ್ಮೀಕಿ ನಿಗಮದ ಹಣ ದುರ್ಬಳಕೆಯಾಗಿದೆ ಮತ್ತು ಅದು ದಲಿತರ ಹಣವಾಗಿತ್ತು ಎಂದು ಆರೋಪಿಸಿದರು. ನಾಗೇಂದ್ರ ಅವರು ದಲಿತ ಸಮುದಾಯಕ್ಕೆ ಸೇರಿದ ಸಚಿವರಾಗಿರುವುದರಿಂದ ಅವರನ್ನು ಗುರಿಯಾಗಿಸಲಾಗಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ವಿಜಯೇಂದ್ರ, ದಲಿತರ ಹಣ ನುಂಗುವಾಗ ದಲಿತರು ನೆನಪಾಗಲಿಲ್ಲವೇ? ಎಂದು ಪ್ರಶ್ನಿಸಿದರು.

ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ನಾಗೇಂದ್ರ ಅವರು ಸಚಿವ ಸ್ಥಾನದಿಂದ ಹೊರಗುಳಿದಿದ್ದ ಸಂದರ್ಭವನ್ನು ಪ್ರಸ್ತಾಪಿಸಿದ ವಿಜಯೇಂದ್ರ, ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಂಡಿದ್ದು ಏಕೆ ಎಂದು ಪ್ರಶ್ನಿಸಿದರು. ನಾಗೇಂದ್ರ ಅವರಿಗೆ ಪ್ರಕರಣದಲ್ಲಿ ಕ್ಲೀನ್‌ಚಿಟ್ ಸಿಕ್ಕಿದೆಯೇ ಎಂಬುದನ್ನೂ ಅವರು ಸರ್ಕಾರವನ್ನು ಪ್ರಶ್ನಿಸಿದರು.

ವಾಲ್ಮೀಕಿ ನಿಗಮದ ಪ್ರಕರಣದ ನೈತಿಕ ಹೊಣೆ ಹೊತ್ತು ನಾಗೇಂದ್ರ ರಾಜೀನಾಮೆ ನೀಡಬೇಕು ಎಂಬುದು ಬಿಜೆಪಿಯ ಒತ್ತಾಯವಾಗಿದೆ. ಈ ಬೇಡಿಕೆಯನ್ನು ಮುಂದಿಟ್ಟುಕೊಂಡು ಪಕ್ಷವು ವಿಧಾನಮಂಡಲದ ಒಳಗೂ ಹೊರಗೂ ಹೋರಾಟ ತೀವ್ರಗೊಳಿಸುವುದಾಗಿ ವಿಜಯೇಂದ್ರ ಸ್ಪಷ್ಟಪಡಿಸಿದರು.

ನಾಗೇಂದ್ರ ರಾಜೀನಾಮೆ ವಿಚಾರ ಈಗ ನಡೆಯುತ್ತಿರುವ ವಿಧಾನಮಂಡಲ ಅಧಿವೇಶನದಲ್ಲೂ ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಪ್ರಮುಖ ಸಂಘರ್ಷದ ವಿಷಯವಾಗಿದೆ.ಆಗಸ್ಟ್ 17ರಂದು ಬಿಜೆಪಿ ಶಾಸಕರು ಪ್ರಕರಣವನ್ನು ಮುಂದಿಟ್ಟುಕೊಂಡು ಸದನದಲ್ಲಿ ಪ್ರತಿಭಟನೆ ನಡೆಸಿದ್ದರು. ಗದ್ದಲದ ಹಿನ್ನೆಲೆಯಲ್ಲಿ ಕಲಾಪವನ್ನು ಕೆಲಕಾಲ ಮುಂದೂಡಲಾಗಿತ್ತು.

ಆಗಸ್ಟ್ 19ರಂದು ವಿಧಾನ ಪರಿಷತ್‌ಗೆ ನಾಗೇಂದ್ರ ಆಗಮಿಸಿದ ಸಂದರ್ಭದಲ್ಲೂ ಬಿಜೆಪಿ ಸದಸ್ಯರು ಗೋ ಬ್ಯಾಕ್ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದ್ದರು. ಇದಕ್ಕೂ ಮುನ್ನ ಆಗಸ್ಟ್ 11ರಂದು ಆರ್. ಅಶೋಕ್, ನಾಗೇಂದ್ರ ರಾಜೀನಾಮೆ ನೀಡುವವರೆಗೆ ವಿಧಾನಮಂಡಲದ ಕಲಾಪಕ್ಕೆ ಅಡ್ಡಿಪಡಿಸುವುದಾಗಿ ಎಚ್ಚರಿಕೆ ನೀಡಿದ್ದರು. ಬಳಿಕ ಬಿಜೆಪಿ ರಾಜ್ಯಾದ್ಯಂತ ಹಾಗೂ ವಿಧಾನಮಂಡಲದ ಒಳಗೆ ಹೋರಾಟ ತೀವ್ರಗೊಳಿಸುವ ನಿಲುವು ಪ್ರಕಟಿಸಿತ್ತು.

ಸಮಸಮಾಜ ನಿರ್ಮಾಣಕ್ಕೆ ಅರಸು ತತ್ವಗಳು ಅಳವಡಿಸಿಕೊಳ್ಳಿ: ಬಾಬುರಾವ್ ಫುಲಾರ



ಆಳಂದ,ಆ.21-

ಶಿಕ್ಷಣ, ಸಂಘಟನೆ ಹಾಗೂ ಹಕ್ಕುಗಳ ಅರಿವಿನ ಮೂಲಕ ಹಿಂದುಳಿದ ವರ್ಗಗಳ ಜನರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಸಬಲರಾಗಬೇಕು. ಸಂಘಟಿತ ಶಕ್ತಿಯ ಮೂಲಕ ತಮ್ಮ ಹಕ್ಕುಗಳನ್ನು ಪಡೆದುಕೊಂಡು, ಡಿ. ದೇವರಾಜ ಅರಸು ಅವರು ಕಂಡಿದ್ದ ಸಾಮಾಜಿಕ ನ್ಯಾಯದ ಸಮಾಜ ನಿರ್ಮಾಣದ ಕನಸನ್ನು ನನಸಾಗಿಸ 'ಬೇಕು ಎಂದು ಹಿರಿಯ ಮುಖಂಡ ಬಾಬುರಾವ್ ಫುಲಾರ ಕರೆ ನೀಡಿದರು.

ಪಟ್ಟಣದ ಜಿಪಂ ಮಾಜಿ ಸದಸ್ಯೆ ಪೂಜಾ ರಮೇಶ ಲೋಹಾರ ಅವರ ನಿವಾಸದಲ್ಲಿ ಹಿಂದುಳಿದ ವರ್ಗಗಳ ತಾಲೂಕು ಘಟಕದ ಆಶ್ರಯದಲ್ಲಿ ಆಯೋಜಿಸಿದ್ದ ಡಿ. ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಗೆ ವಿಶೇಷ ಆದ್ಯತೆ ನೀಡಿದ ದೂರದೃಷ್ಟಿಯ ನಾಯಕರು. ಅವರ ಆಡಳಿತದ ಫಲವಾಗಿ ಸಮಾಜದ ದುರ್ಬಲ ವರ್ಗಗಳ ಜನರಲ್ಲಿ ಆತ್ಮವಿಶ್ವಾಸ ಮೂಡಿತು. ಹಿಂದುಳಿದವರು ಸಮಾಜದ ಮುಖ್ಯವಾಹಿನಿಗೆ ಬರಲು ಹಲವು ಅವಕಾಶಗಳು ದೊರೆತವು. ಇಂತಹ ಮಹಾನ್ ನಾಯಕನ ತತ್ವಗಳನ್ನು ಕೇವಲ ಜಯಂತಿ ದಿನದಂದು ಸ್ಮರಿಸುವುದಕ್ಕಿಂತ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದು ಫುಲಾರ ಹೇಳಿದರು.

ಹಿಂದುಳಿದ ವರ್ಗಗಳ ಜನರು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವತ್ತ ಹೆಚ್ಚಿನ ಗಮನ ಹರಿಸಬೇಕು. ಶಿಕ್ಷಣವು ಸಾಮಾಜಿಕ ಬದಲಾವಣೆ ಹಾಗೂ ಆರ್ಥಿಕ ಸ್ವಾವಲಂಬನೆಗೆ ಪ್ರಮುಖ ಸಾಧನವಾಗಿದೆ. ಯುವಕರು ಸರ್ಕಾರದ ಸೌಲಭ್ಯಗಳು, ಮೀಸಲಾತಿ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸಮಗ್ರ ಮಾಹಿತಿ ಪಡೆದುಕೊಂಡು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಮುಖಂಡ ಭೀಮಾಶಂಕರ ಜಮಗಿ, ಹಿಂದುಳಿದವರ ಬದುಕಿಗೆ ಸಾಮಾಜಿಕ ನ್ಯಾಯದ ಬೆಳಕು ನೀಡಿದ ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಪಾಲಿಗೆ ಮಹಾನ್ ನಾಯಕರು. ಅವರ ಜನಪರ ಆಡಳಿತ ಹಾಗೂ ಸಾಮಾಜಿಕ ಕಳಕಳಿಯನ್ನು ಇಂದಿನ ಪೀಳಿಗೆ ಅರ್ಥಮಾಡಿಕೊಂಡು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂದರು. ರಮೇಶ ಲೋಹಾರ ಮಾತನಾಡಿ, ಹಿಂದುಳಿದ ವರ್ಗಗಳ ಸಮುದಾಯದಲ್ಲಿ ಒಗ್ಗಟ್ಟು ಬೆಳೆಸುವುದು ಇಂದಿನ ಅಗತ್ಯವಾಗಿದೆ. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು. ಸರ್ಕಾರದ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಜಾಗೃತಿ ಮೂಡಿಸಬೇಕು. ಶಿಕ್ಷಣ, ಉದ್ಯೋಗ, ಉದ್ಯಮ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬರಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಿ.ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಲಾಯಿತು.



ನಿರಂತರ ಓದು ಅವಶ್ಯಕ: ಹೊನ್ಕಲ್

ಕಲಬುರಗಿ,ಆ.20-ಹಿರಿಯ ಕವಿಗಳ ಕಾವ್ಯವನ್ನು ನಿರಂತರವಾಗಿ ಓದುವುದರ ಮೂಲಕ ಯುವ ಬರಹಗಾರರ ಕಾವ್ಯ ಗಟ್ಟಿಗೊಳ್ಳಲು ಸಾಧ್ಯವಾಗುತ್ತದೆ ಎಂದು ನಾಡಿನ ಹಿರಿಯ ಸಾಹಿತಿ ಡಾ.ಸಿದ್ದರಾಮ ಹೊನ್ಕಲ್ ಹೇಳಿದರು.

ಕಲ್ಬುರ್ಗಿ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕವಿ ಸಮ್ಮೇಳನ , ಸಂಗೀತ ಸಂಭ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಯುವ ಸಾಹಿತಿಗಳು ತಾವು ಬರೆದ ಕವನಗಳನ್ನು ಇನ್ನೊಬ್ಬರಿಗೆ ತೋರಿಸಿ ತಿದ್ದಿಸಿಕೊಂಡರೆ ಕಾವ್ಯ ಶುದ್ಧವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಡಾ.ವಿಜಯಕುಮಾರ್ ಪರುತೆ ಅವರು ಮಾತನಾಡುತ್ತ ಇಲ್ಲಿ ಅನೇಕ ಕವಿಗಳು ಉತ್ತಮ ರೀತಿಯಲ್ಲಿ ಕವನ ವಾಚನ ಮಾಡಿದರು. ಕವಿ ಸಮ್ಮೇಳನ ತುಂಬಾ ಅದ್ಭುತವಾಗಿ ನಡೆದು ಬಂತು ಎಂದು ಹೇಳಿದರು.

ಶಿವಾನಂದ ಖಜುಗಿ9 ಅವರು ಬಿ ಎಚ್ ನಿರಗುಡಿ ಅವರು ಬರೆದ ಸೂಫಿಸಂತ ಬಂದೇ ನವಾಜರ ಪುಸ್ತಕ ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಚಿಂತಕ ಪ್ರೆ.ಯಶ್ವಂತರಾಯ ಅಷ್ಟಗಿ ,ಸಂಘಟಕ ಶರಣಗೌಡ ಪಾಟೀಲ್ ಪಾಳಾ, ಸುಮಾಜ ಸೇವಕರಾದ ನೀಲಕಂಠ ಜಮಾದಾರ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಚ್.ನಿರಗುಡಿ ಪ್ರಾಸ್ತಾವಿಕ ಮಾತನಾಡಿದರು.

ಕವಿ ಸಮ್ಮೇಳನದಲ್ಲಿ ಕವಿಗಳು: ಚಾಮರಾಜ ದೊಡ್ಡಮನಿ, ಮಾಲಾ ಕಣ್ಣಿ, ರಾಜೇಂದ್ರ ಝಳಕಿ ,ಡಾ ಪರ್ವಿನ್ ಸುಲ್ತಾನಾ, ಪರಮಾನಂದ ಸರಸಂಬಿ ,ಬಾಬು ಜಾಧವ್ ,ರೇವಣಸಿದ್ದಪ್ಪ ದುಖಾನ್, ಗೋದಾವರಿ ಪಡಶೆಟ್ಟಿ ,ಮಂಜುಳಾ ಪಾಟೀಲ್, ಪಲ್ಲವಿ ಕುಲಕರ್ಣಿ, ಸುನಿತಾ ಮುಲಗೆ, ಶ್ರೀಶೈಲ ಮದಾನೆ ಮುಂತಾದವರು ಕವನ ವಾಚನ ಮಾಡಿದರು.

ಸಂಗೀತ ಸಂಭ್ರಮದಲ್ಲಿ ಜನಪ್ರಿಯ ಕಲಾವಿದರು ಅಣ್ಣಾರಾಯ ಮತ್ತಿಮೂಡ, ಬಾಬುರಾವ ಕೋಬಾಳ್, ಸೂರ್ಯಕಾಂತ್ ಪೂಜಾರಿ, ಸೈದಪ್ಪ ಸಪ್ಪನಗೋಳ, ಬಸಯ್ಯಾ ಗುತ್ತೇದಾರ್, ಸೂರ್ಯಕಾಂತ ಹೋಳೇಅವರಾದ ಮುಂತಾದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು

ವೀರಭದ್ರಯ್ಯ ಸ್ಥಾವರಮಠ, ಮೌನೇಶ್ ಪಂಚಾಳ ವಾದ್ಯ ಸಹಕಾರ ನೀಡಿದರು. ಕುಮಾರಿ ಸುಮನ್ ಮಳಕೇಡಕರ್ ಭರತನಾಟ್ಯ ಮಾಡಿದರು.



ಆಳಂದ ಕ್ಷೇತ್ರಕ್ಕೆ ಕುಡಿಯುವ ನೀರಿಗಾಗಿ 1 ಕೋಟಿ ರೂ. ಅನುದಾನ : ಸಚಿವ ಈಶ್ವರ ಖಂಡ್ರೆ

ಕಲಬುರಗಿ,ಆ.21-

ಮಳೆ ಕೊರತೆ ಹಾಗೂ ಅಂತರ್ಜಲ ಕುಸಿತದಿಂದ ಆಳಂದ ವಿಧಾನಸಭಾ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಕ್ಷೇತ್ರಕ್ಕೆ ತುರ್ತು ಕುಡಿಯುವ ನೀರು ಪೂರೈಕೆಗಾಗಿ ಸರ್ಕಾರದಿಂದ 1 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ವಿಧಾನಸಭೆಯಲ್ಲಿ ಮಾಹಿತಿ ನೀಡಿದ್ದಾರೆ.

ವಿಧಾನಸಭೆಯಲ್ಲಿ ಶಾಸಕ ಬಿ.ಆರ್ ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ, ಕಲಬುರಗಿ ಜಿಲ್ಲೆಯಲ್ಲಿ 2026-27ನೇ ಸಾಲಿನಲ್ಲಿ ತುರ್ತು ಕುಡಿಯುವ ನೀರು ಪೂರೈಕೆಗಾಗಿ 5 ಕೋಟಿ ಅನುದಾನ ನೀಡಲಾಗಿದ್ದು, ಒಟ್ಟಾರೆ ತುರ್ತು ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ 3.53 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತಿದೆ. ಅದರಂತೆ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆಳಂದ ತಾಲ್ಲೂಕಿನಲ್ಲಿ ತುರ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ 69.50 ಲಕ್ಷ ಮೊತ್ತದಲ್ಲಿ 42 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 33 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ ಎಂದು ಹೇಳಿದ್ದಾರೆ.

ಇದಲ್ಲದೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಉದ್ದೇಶದಿಂದ ಜುಲೈ 31ರಂದು ಆಳಂದ ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರದಿಂದ ಹೆಚ್ಚುವರಿಯಾಗಿ 1 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ತುರ್ತು ಪರಿಹಾರ ಒದಗಿಸುವ ನಿಟ್ಟಿನಲ್ಲಿ ಟ್ಯಾಂಕರ್ ಹಾಗೂ ಇತರ ಪರ್ಯಾಯ ವ್ಯವಸ್ಥೆಗಳ ಮೂಲಕ ನೀರು ಪೂರೈಕೆ ಮುಂದುವರಿಸಲಾಗಿದೆ ಎಂದಿದ್ದಾರೆ.

ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆ



ಚಿಂಚೋಳಿ,ಆ.21-

ಶೋಷಿತರು ಹಾಗೂ ಹಿಂದುಳಿದ ವರ್ಗಗಳ ಆಶಾಕಿರಣ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 111ನೇ ಜನ್ಮ ದಿನಾಚರಣೆಯನ್ನು ತಾಲೂಕು ಆಡಳಿತ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಚಂದಾಪುರದ ಹಳೆ ತಹಶೀಲ್ದಾರ್ ಕಚೇರಿ ಸಮೀಪದ ಡಿ. ದೇವರಾಜ ಅರಸು ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ ಅವರು, ಡಿ. ದೇವರಾಜ ಅರಸು ಅವರು ಕೇವಲ ಅಧಿಕಾರಕ್ಕಾಗಿ ರಾಜಕಾರಣ ಮಾಡಿದವರಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಕಣ್ಣೀರು ಒರೆಸಲು ಅಧಿಕಾರವನ್ನು ಸಾಧನವಾಗಿ ಬಳಸಿಕೊಂಡ ಮಹಾನ್ ನಾಯಕರು ಎಂದು ಸ್ಮರಿಸಿದರು.

ಉಳುವವನೇ ಭೂಮಿಯ ಒಡೆಯ ಕಾಯ್ದೆಯ ಮೂಲಕ ಬಡ ರೈತರಿಗೆ ಭೂಮಿಯ ಹಕ್ಕು ಕಲ್ಪಿಸಿ ಸಾಮಾಜಿಕ ಕ್ರಾಂತಿಗೆ ಕಾರಣರಾದ ಅರಸು ಅವರ ಕೊಡುಗೆ ಅಪಾರವಾಗಿದೆ. ಜೀತಪದ್ಧತಿ ನಿರ್ಮೂಲನೆ, ಬಡವರ ಸಾಲ ಮನ್ನಾ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳ ಸ್ಥಾಪನೆ ಸೇರಿದಂತೆ ಅವರು ಜಾರಿಗೆ ತಂದ ಹಲವು ಜನಪರ ಯೋಜನೆಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಹೇಳಿದರು.

ಮುಖ್ಯ ಉಪನ್ಯಾಸಕರಾಗಿ ಮಾತನಾಡಿದ ಸಿ.ಬಿ. ಪಾಟೀಲ ಕಾಲೇಜು, ಚಂದಾಪುರದ ಡಾ. ಎಂ.ಎನ್. ಸುಲ್ತಾನಪೂರ ಅವರು, ಡಿ. ದೇವರಾಜ ಅರಸು ಅವರು 1915ರ ಆಗಸ್ಟ್ 20ರಂದು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ ಜನಿಸಿದರು. ಮೈಸೂರಿನಲ್ಲಿ ಶಿಕ್ಷಣ ಪೂರ್ಣಗೊಳಿಸಿದ ಬಳಿಕ ರಾಜಕೀಯ ಪ್ರವೇಶಿಸಿದ ಅವರು, ತಮ್ಮ ಆಡಳಿತಾವಧಿಯಲ್ಲಿ ಹಲವು ಮಹತ್ವದ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದರು ಎಂದು ತಿಳಿಸಿದರು.

1973ರ ನವೆಂಬರ್ 1ರಂದು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಿದ ಐತಿಹಾಸಿಕ ಸಂದರ್ಭ ಅರಸು ಅವರ ಆಡಳಿತಾವಧಿಯಲ್ಲೇ ನಡೆದಿದ್ದು, ಅವರ ಸಮಾಜಮುಖಿ ಚಿಂತನೆಗಳು ಹಾಗೂ ಆದರ್ಶಗಳು ಇಂದಿನ ಯುವ ಪೀಳಿಗೆಗೆ ಸದಾ ಪ್ರೇರಣೆಯಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರಾಹುಲ್ ಪಂಚಶೀಲ, ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ. ಸಯ್ಯದ್ ಲತೀಫ್, ಅಗ್ನಿಶಾಮಕ ಠಾಣಾಧಿಕಾರಿ ಶೇಖ್ ಹಸನ್, ಸಾವಿತ್ರಿ ಬಡಿಗೇರ್, ಕ್ಷೇತ್ರ ಶಿಕ್ಷಣಾಧಿಕಾರಿ ದೋಳಪ್ಪ, ಮುಖಂಡರಾದ ಕೆ.ಎಂ. ಬಾರಿ, ಹಣಮಂತ ಪೂಜಾರಿ, ಗೋಪಾಲ್ ಎಂ.ಪಿ., ಖಾಲಿಲ್ ಪಟೇಲ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು, ಕನ್ನಡಪರ ಸಂಘಟನೆಗಳ ಅಧ್ಯಕ್ಷರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರಾಹುಲ್ ಪಂಚಶೀಲ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಪಾಲಮೂರ ಕಾರ್ಯಕ್ರಮ ನಿರೂಪಿಸಿದರು. ಅಶೋಕ್ ಹೂವಿನಬಾಯಿ ವಂದನಾರ್ಪಣೆ ಸಲ್ಲಿಸಿದರು.

ಡಿ. ದೇವರಾಜ್ ಅರಸು ಅವರು ದುರ್ಬಲ ವರ್ಗಗಳ ಸಬಲೀಕರಣಕ್ಕಾಗಿ ಮಹತ್ವದ ಕೊಡುಗೆ ನೀಡಿದ್ದಾರೆ : ಅಮೃತರಾವ್ ಚಿಮಕೋಡೆ

ಬೀದರ್,ಆ.21-

ಡಿ.ದೇವರಾಜ ಅರಸ್ ಅವರು ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಹಿಂದುಳಿದವರು, ದಲಿತರು ಮತ್ತು ದುರ್ಬಲ ವರ್ಗಗಳ ಸಬಲೀಕರಣಕ್ಕಾಗಿ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಬೊಮಗೊಂಡೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಬೀದರ್ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಅಮೃತರಾವ್ ಚಿಮಕೋಡೆ ಅವರು ಹೇಳಿದರು.

ನಗರದ ಮಹಾತ್ಮಾ ಬೊಮಗೊಂಡೇಶ್ವರ ಶಿಕ್ಷಣ ಸಂಸ್ಥೆಯ ಡಿ. ದೇವರಾಜ ಅರಸು ಡಿ.ಎಡ್. ಕಾಲೇಜು ಹಾಗೂ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ



ಜಂಟಿ ಸಹಯೋಗದಲ್ಲಿ ಮಾಜಿ ಮುಖ್ಯಮಂತ್ರಿ ದಿ. ಡಿ. ದೇವರಾಜ್ ಅರಸು ಅವರ 111ನೇ ಜನ್ಮದಿನಾಚರಣೆ ಹಾಗೂ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿ ಅವರ 82ನೇ ಜನ್ಮದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಅವರು ಮಾತನಾಡಿದರು.

ದೇವರಾಜ್ ಅರಸು ಅವರ ಜನಪರ ಆಡಳಿತ ಮತ್ತು ಸಾಮಾಜಿಕ ನ್ಯಾಯದ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಅವರು ಸ್ಮರಿಸಿದರು.

ಭಾರತ ರತ್ನ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ಯುವಶಕ್ತಿ, ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಆಧುನಿಕ ಭಾರತದ ನಿರ್ಮಾಣಕ್ಕೆ ದೂರದೃಷ್ಟಿಯ ಕೊಡುಗೆ ನೀಡಿದ್ದಾರೆ. ದೇಶದ ಅಭಿವೃದ್ಧಿಯಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂಬ ಅವರ ಚಿಂತನೆ ಇಂದಿನ ಪೀಳಿಗೆಗೆ ಪ್ರೇರಣೆಯಾಗಿದೆ ಎಂದು ಅವರು ಹೇಳಿದರು.

ಈ ಕಾರ್ಯಕ್ರಮವನ್ನು ಶಸ್ತ್ರಚಿಕಿತ್ಸ ಕ ಡಾ. ಅಹ್ಮದ್ ಖಾನ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬೀದರ್ ಬ್ಲಡ್ ಬ್ಯಾಂಕ್‌ನ ರಕ್ತನಿಧಿ ಅಧಿಕಾರಿ ಆಕಾಶ್ ಪಾಟೀಲ್, ಮಹಾತ್ಮಾ ಬೊಮಗೊಂಡೇಶ್ವರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗೋವರ್ಧನ್ ರಾಠೋಡ್, ಉಪಾಧ್ಯಕ್ಷ ಅವಿನಾಶ್ ಚಿಮಕೋಡೆ, ರಾಜಶೇಖರ್ ಸೇಡಂಕರ್, ವೈಜಿನಾಥ್ ಬಿರಾದಾರ್, ಡಿ. ದೇವರಾಜು ಅರಸು ಡಿ.ಎಡ್. ಕಾಲೇಜಿನ ಪ್ರಾಚಾರ್ಯರು, ಕವಿರತ್ನ ಕಾಳಿದಾಸ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕುಲಕರ್ಣಿ ಗಿರಿರಾವ್, ಮಾತೋಶ್ರೀ ಅಹಿಲ್ಯಾಬಾಯಿ ಹೋಳ್ಕರ್ ಸಂಸ್ಥೆಯ ಮುಖ್ಯಗುರು ಸೈಯದ್ ಸಲಾವುದ್ದೀನ್, ಬಕ್ಕಪ್ಪ, ವಿಷ್ಣು ಹಾಗೂ ರಾಜಶೇಖರ್ ಚಿಟ್ಟಾ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ನಕಲಿ ಔಷಧಿ ಹಾವಳಿ; ದಾಳಿಯಷ್ಟೇ ಸಾಲದು, ಸರ್ಕಾರ ಕಠಿಣ ಕ್ರಮ ಜರುಗಿಸಲಿ

ಭಾರತದ ಆರೋಗ್ಯ ಕ್ಷೇತ್ರ ಅನಾರೋಗ್ಯಪೀಡಿತವಾಗಿ ದಶಕಗಳೇ ಸಂದಿವೆ. ಅತಿ ಹೆಚ್ಚು ಜನಸಂಖ್ಯೆ ಇರುವ ಈ ದೇಶ ವಿದೇಶಿ ಮೆಡಿಕಲ್ ಮಾಫಿಯಾಗಳ ದೊಡ್ಡ ಮಾರುಕಟ್ಟೆ. ಒಂದು ಕಡೆ ಔಷಧಿ ಮಾಫಿಯಾ, ಮತ್ತೊಂದು ಕಡೆ ನಕಲಿ ವೈದ್ಯರು, ಸಾಲದೆಂಬಂತೆ ನಕಲಿ ಔಷಧಿ ದಂಧೆ. ಈ ಮಧ್ಯೆ ಜನರ ಆರೋಗ್ಯದ ಮೇಲೆ ಕಾಳಜಿ ಯಾರಿಗೂ ಇಲ್ಲ.

ಬಿಡದಿಯಲ್ಲಿ ನಕಲಿ ಔಷಧಿಗಳಿಗೆ ಬಹುರಾಷ್ಟ್ರೀಯ ಕಂಪನಿಗಳ ಲೇಬಲ್ ಬಳಸಿ ಮರುಪ್ಯಾಕ್ ಮಾಡುತ್ತಿದ್ದ ಅಡೆಯ ಮೇಲೆ ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಜಂಟಿಯಾಗಿ ದಾಳಿ ನಡೆಸಿ, ₹4.91 ಕೋಟಿ ಮೌಲ್ಯದ ಔಷಧಿಗಳು, ಬಾಟಲಿಗಳು, ಲೇಬಲ್‌ಗಳು, ಪ್ಯಾಕೇಜಿಂಗ್ ಸಾಮಗ್ರಿ ಮತ್ತು ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ. ಇದು ನಿಜಕ್ಕೂ ಆಘಾತಕಾರಿ ಸುದ್ದಿ. ನಕಲಿ ಔಷಧಿ ತಯಾರಿಕೆಯೇ ಅಪಾಯಕಾರಿ; ಅದಕ್ಕೆ ಬಹುರಾಷ್ಟ್ರೀಯ ಕಂಪನಿಯ ಲೇಬಲ್ ಅಂಟಿಸಿ ಜನರನ್ನು ಯಾಮಾರಿಸಿ ಹಣ, ಆರೋಗ್ಯ ಎರಡನ್ನೂ ದೋಚುವ ನೀಚರ ವಿರುದ್ಧ ಕಠಿಣ ಕ್ರಮ ಜರುಗಿಸುವ ಕೆಲಸ ತುರ್ತಾಗಿ ಆಗಬೇಕಿದೆ. ಯಥಾ ಪ್ರಕಾರ ಜಾಮೀನು, ಮೇಲ್ಮನವಿ, ಖುಲಾಸೆಯಂತಹ ಅವಕಾಶಗಳು ಈ ದುಷ್ಟರಿಗೆ ಸಿಗದಂತೆ ಮಾಡುವುದು ಸರ್ಕಾರದ ಆದ್ಯತೆಯಾಗಬೇಕು. ಪಾತಕಿಗಳ ಪಾಲಿಗೆ ಕಾನೂನಿನ ಕೈಗಳು ಬಹು ಉದ್ದ ಎಂಬ ಮಾತನ್ನು ನಡೆಸಿಕೊಡಬೇಕು.

ಆರೋಪಿ ಬಿಡದಿಯ ಸಿ.ಕೆ.ತಾಂಡ್ಯ ಸಮೀಪದ ಫಾರ್ಮ್‌ಹೌಸ್ ಲೀಸಿಗೆ ಪಡೆದು ಕಡಿಮೆ ಬೆಲೆಯುಳ್ಳ ಔಷಧಿಗಳನ್ನು ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಿಂದ ಆಮದು ಮಾಡಿಕೊಂಡು ಅದಕ್ಕೆ ಬೇರೆ ಲೇಬಲ್ ಅಂಟಿಸುತ್ತಿದ್ದ. ಮತ್ತು ಸೇರಿದಂತೆ ಹಲವು ಕಂಪನಿಗಳ ಲೇಬಲ್ ಬಳಸಿ ಕಳೆದ ಒಂದು ವರ್ಷದಿಂದ ಈ ದಂಧೆ ನಡೆಸುತ್ತಿದ್ದನಂತೆ! ಇದುವರೆಗೆ ಅದೆಷ್ಟು ಜನ ಈ ನಕಲಿ ಔಷಧಿ ಪಡೆದು ಆರೋಗ್ಯ, ಹಣ ಎರಡನ್ನೂ ಕಳೆದುಕೊಂಡಿದ್ದಾರೆ ಎಂಬ ಲೆಕ್ಕವಿದೆಯೇ? ಆರೋಗ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪ ಎದ್ದು ಕಾಣುತ್ತಿದೆ. ಹಣದ ವ್ಯಾಮೋಹ, ಧನದಾಹ ನೀಗಿಸಲು ಅಮಾಯಕರ ಜೀವ ಬಲಿ ಪಡೆಯುವ ಇಂತಹ ನೀಚರಿಗೆ ಕಠಿಣ ಶಿಕ್ಷೆಯಾಗಬೇಕು.

ಭಾರತದ ಆರೋಗ್ಯ ಕ್ಷೇತ್ರವನ್ನು ಅನಾರೋಗ್ಯ ಬಾಧಿಸಿ ದಶಕಗಳೇ ಸಂದಿವೆ. ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಇರುವ ಈ ದೇಶ ವಿದೇಶಿ ಮೆಡಿಕಲ್ ಮಾಫಿಯಾಗಳ ದೊಡ್ಡ ಮಾರುಕಟ್ಟೆ. ಒಂದು ಕಡೆ ಔಷಧಿ ಮಾಫಿಯಾ, ಮತ್ತೊಂದು ಕಡೆ ನಕಲಿ ವೈದ್ಯರು, ಸಾಲದು ಎಂಬಂತೆ ನಕಲಿ ಔಷಧಿ ದಂಧೆ; ಈ ಮಧ್ಯೆ ಜನರ ಆರೋಗ್ಯದ ಮೇಲೆ ಕಾಳಜಿ ಯಾರಿಗೂ ಇಲ್ಲ. ಲಸಿಕೆ ಪಡೆದು ನವಜಾತ ಶಿಶುಗಳು ಮರಣ ಹೊಂದಿರುವುದು, ಹೆರಿಗೆಯ ನಂತರ ನೀಡುವ ಔಷಧಿಯ ಅಡ್ಡಪರಿಣಾಮವಾಗಿ ಬಾಣಂತಿಯರ ಸಾವು ಆಗಾಗ ಸದ್ದು ಸುದ್ದಿಯಾಗುತ್ತಿರುವುದನ್ನು ಗಮನಿಸಿದ್ದೇವೆ. ಇವೆಲ್ಲ ಮೆಡಿಕಲ್ ಮಾಫಿಯಾದತ್ತಲೇ ಬೆರಳು ತೋರುತ್ತಿವೆ. ಆದರೆ, ಇಂತಹ ಮಾಫಿಯಾಗಳು ಅಧಿಕಾರಸ್ಥರು, ರಾಜಕಾರಣಿಗಳ ಬೆಂಬಲವಿಲ್ಲದೇ ನಡೆಯಲು ಸಾಧ್ಯವೇ ಇಲ್ಲ. ಒಂದು ಸರ್ಕಾರ ಕಪ್ಪುಪಟ್ಟಿಗೆ ಹಾಕಿದ ಕಂಪನಿಗೆ ಮತ್ತೊಂದು ಸರ್ಕಾರ ಕಂಪನಿ ರತ್ನಗಂಬಳಿ ಹಾಸಿ ಗುತ್ತಿಗೆ ನೀಡಿರುವ ಪ್ರಕರಣಗಳ ಉದಾಹರಣೆ ನಮ್ಮ ಮುಂದಿದೆ. ಅಂಗನವಾಡಿ ಮಕ್ಕಳಿಗೆ ಪೂರೈಕೆ ಮಾಡುವ ಆಹಾರ, ಬಿಸಿಯೂಟ, ಅನ್ನಭಾಗ್ಯದಲ್ಲಿ ನೀಡುವ ಅಕ್ಕಿ ಬೇಳೆ ಹೀಗೆ ಮನುಷ್ಯನ ಆರೋಗ್ಯಕ್ಕೆ ಬೇಕಿರುವ ಎಲ್ಲವೂ ಕಲಬೆರಕೆ ಅಥವಾ ಕಳಪೆ. ಇದು ಇಂದಿನ ಸಮಸ್ಯೆ ಅಲ್ಲ, ಮತ್ತು ಮುಗಿಯುವ ಸಮಸ್ಯೆಯೂ ಅಲ್ಲ. ಎಲ್ಲವೂ ಸರ್ಕಾರ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ. ರಾಜಕಾರಣಿಗಳ ಸ್ವಜನ ಪಕ್ಷಪಾತ, ಸ್ವಂತ ಲಾಭಕ್ಕಾಗಿ ಬೇನಾಮಿ ಹೆಸರಿನಲ್ಲಿ ಕಂಪನಿಗಳನ್ನು ಸ್ಥಾಪಿಸಿ ಸರ್ಕಾರದ ಗುತ್ತಿಗೆಗಳನ್ನು ಪಡೆಯುತ್ತಿರುವುದು. ಇವೆಲ್ಲದರ ಪರಿಣಾಮವಾಗಿ ಇಡೀ ಸಮಾಜದ ಸ್ವಾಸ್ಥ್ಯ ಅಪಾಯದಲ್ಲಿದೆ.

ಖಾಸಗಿ ಆಸ್ಪತ್ರೆಗಳು ಜನರ ರಕ್ತ ಹೀರುವ, ಹಣ ಸುಲಿಗೆಯ ಕೇಂದ್ರಗಳಾಗಿವೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಬಡ ಮತ್ತು ಮಧ್ಯಮ ವರ್ಗದ ಜನರ ಜೀವ ಹಿಂಡುವ ಕಮಿಷನ್, ಲಂಚ ತಾಂಡವವಾಡುತ್ತಿದೆ. ಸಾಮಾನ್ಯ ಕುಟುಂಬಗಳಲ್ಲಿ ಒಬ್ಬ ವ್ಯಕ್ತಿಗೆ ಗಂಭೀರ ಆರೋಗ್ಯ ಸಮಸ್ಯೆ ಉಂಟಾದರೆ ಇಡೀ ಕುಟುಂಬ ಆರ್ಥಿಕ ಸಮಸ್ಯೆಗೆ ಸಿಲುಕುತ್ತದೆ. ಸರ್ಕಾರದ ಎಲ್ಲಾ ಉಚಿತ ಚಿಕಿತ್ಸೆ , ಸೌಲಭ್ಯಗಳಾಚೆಗೂ ಖಾಸಗಿ ಆಸ್ಪತ್ರೆಗಳ ಮೊರೆ ಹೋಗುವ ಸಂದರ್ಭ ಬಂದರೆ ಮುಗಿದೇ ಹೋಯ್ತು. ನಾವು ಉಣ್ಣುವ ಪ್ರತಿಯೊಂದು ಆಹಾರವೂ ಕಲಬೆರಕೆ, ವಿಷಯುಕ್ತವಾಗುತ್ತಿದೆ. ನಾವು ಸೇವಿಸುವ ಕಲಬೆರಕೆ ಆಹಾರಗಳೇ ಆರೋಗ್ಯ ಸಮಸ್ಯೆಯ ಮೂಲವಾಗುತ್ತಿದೆ. ಬೊಜ್ಜು, ಖಿನ್ನತೆ, ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳು ಯುವಜನರನ್ನೂ ಬಾಧಿಸುತ್ತಿವೆ. ಊಟ, ವಸತಿ, ಶಿಕ್ಷಣದ ಜೊತೆಗೆ ಆಸ್ಪತ್ರೆ ಖರ್ಚಿಗೆಂದು ಹಣ ಕೂಡಿಡುವ ಅನಿವಾರ್ಯತೆ ಬಂದೊದಗಿದೆ. ಕೂಲಿ ಕಾರ್ಮಿಕ ಕುಟುಂಬಗಳು ಆರೋಗ್ಯ ವಿಮೆ ಮಾಡುವುದು ಅಸಾಧ್ಯ. ಜನರಿಂದ ಆಯ್ಕೆಯಾಗುವ ಸರ್ಕಾರಗಳು, ಜನಪ್ರತಿನಿಧಿಗಳು ಜನರ ಆರೋಗ್ಯದ ಬಗ್ಗೆ ಯೋಚಿಸದಿರುವುದು ದುರಂತ.

ಯು ಟಿ ಖಾದರ್ ಅವರು ನೂತನ ಆರೋಗ್ಯ ಸಚಿವರಾದ ನಂತರ ಬೆಂಗಳೂರಿನ ಹೋಟೆಲು, ಕ್ಯಾಂಟೀನ್, ರೈಲ್ವೆ ಆಹಾರ ಕೇಂದ್ರಗಳ ಮೇಲೆ ದಾಳಿ ನಡೆಸಿ ಕಳಪೆ ಮತ್ತು ಅವಧಿ ಮೀರಿದ ಸಂಸ್ಕರಿತ ಆಹಾರ ಪತ್ತೆ ಹಚ್ಚಿ ಸುದ್ದಿಯಾಗಿದ್ದಾರೆ. ಇದು ನಿರಂತರವಾಗಿ ನಡೆಯಬೇಕಿರುವ ಕಾರ್ಯಾಚರಣೆ. ಮತ್ತೆ ರಾಜ್ಯದ ಎಲ್ಲ ಜಿಲ್ಲೆ, ತಾಲ್ಲೂಕು ಕೇಂದ್ರಗಳಲ್ಲೂ ಸ್ಥಳೀಯ ಫುಡ್ ಇನ್‌ಸ್ಪೆಕ್ಟರ್‌ಗಳು ಮಾಡಬೇಕಿರುವ ಕರ್ತವ್ಯ. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿದರೆ, ನಿಸ್ವಾರ್ಥವಾಗಿ ಕೆಲಸ ಮಾಡಿದರೆ ಇಂತಹ ಅಧ್ವಾನಗಳು ನಡೆಯಲು ಸಾಧ್ಯವೇ ಇಲ್ಲ. ಬಹುತೇಕ ಪ್ರಕರಣಗಳಲ್ಲಿ ಕೇಸು ದಾಖಲಾದ ನಂತರ ಏನಾಯ್ತು ಎಂಬುದು ಗೊತ್ತೇ ಆಗುವುದಿಲ್ಲ. ಹಣ ಪಡೆದು ಅಧಿಕಾರಿಗಳು ದುರುಳರ ಜೊತೆಗೆ ಶಾಮೀಲಾಗಿ ಮುಚ್ಚಿ ಹಾಕುತ್ತಾರೆ ಎಂಬುದು ಕೇವಲ ಆರೋಪವಲ್ಲ. ಬಹುತೇಕ ಕಣ್ಣ ಮುಂದೆಯೇ ನಡೆಯುತ್ತಿರುವ ಸತ್ಯ. ಸಮಸ್ಯೆಯ ಮೂಲಕ್ಕೆ ಮದ್ದು ಅರೆಯುವ ಕೆಲಸವಾಗದೇ ಔಷಧ ಮಾಫಿಯಾಕ್ಕೆ ಕಡಿವಾಣ ಹಾಕುವುದು ಅಸಾಧ್ಯ. ಇದು ರಾಜ್ಯವೊಂದರ ಸಮಸ್ಯೆಯಲ್ಲ, ಇಡೀ ದೇಶವನ್ನು ಮಾಫಿಯಾಗಳೇ ನಡೆಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇದನ್ನು ಗಂಭೀರ ಸಮಸ್ಯೆಯಾಗಿ ಪರಿಗಣಿಸಬೇಕಿದೆ.

ದಾಳಿಯ ವಿವರಗಳನ್ನು ನೀಡಿದ ಪ್ರಕಾರವೇ, ತಪ್ಪು ಮಾಡಿರುವವರನ್ನು ಕಾನೂನಿನ ಕುಣಿಕೆಗೆ ಸಿಕ್ಕಿಸಿ ಶಿಕ್ಷೆಗೆ ಗುರಿಪಡಿಸಿದ ಲೆಕ್ಕವನ್ನೂ ಸಚಿವರು ಮುಂದೊಮ್ಮೆ ಸಾರ್ವಜನಿಕರಿಗೆ ನೀಡುವಂತಾಗಲಿ.

ಮೋದಿ ಸರ್ಕಾರದ 'ಪಿಎಂ ಕೇರ್ಸ್' ನಿಧಿಯ ಅಸಲಿಯತ್ತು: ₹8,452 ಕೋಟಿ ಸಂಗ್ರಹ, ಬಳಕೆಯಾಗಿದ್ದು ಕೇವಲ ಶೇ. 0.01

ಕೋಟ್ಯಂತರ ಜನರ ಭಾವನೆಗಳು ಮತ್ತು ದೇಣಿಗೆಯಿಂದ ರೂಪಿತವಾದ ಬೃಹತ್ ನಿಧಿಯನ್ನು ಒಂದು ಖಾಸಗಿ ಟ್ರಸ್ಟ್ ಎಂಬಂತೆ ನಿರ್ವಹಿಸುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ. ಲೆಕ್ಕಪತ್ರಗಳನ್ನು ವರ್ಷಗಟ್ಟಲೆ ಬಚ್ಚಿಟ್ಟು, ಸಾರ್ವಜನಿಕ ಉತ್ತರದಾಯಿತ್ವದಿಂದ ನುಣುಚಿಕೊಳ್ಳುವ ಪ್ರವೃತ್ತಿ ಪ್ರಧಾನಿ ಮೋದಿಯವರ ಆಡಳಿತದ ಮೇಲೆ ಅಳಿಸಲಾಗದ ಕಳಂಕವನ್ನು ಮೂಡಿಸಿದೆ.



ಕರೋನಾ ಸಾಂಕ್ರಾಮಿಕದ (-19) ಸಂದರ್ಭದಲ್ಲಿ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಸ್ಥಾಪಿಸಲಾದ ಪ್ರಧಾನಿ ನರೇಂದ್ರ ಮೋದಿ ಸರ್ಕಾರದಪಿಎಂ ಕೇರ್ಸ್ ( ) ನಿಧಿಯ ಆರ್ಥಿಕ ಲೆಕ್ಕಾಚಾರಗಳು ಬರೋಬ್ಬರಿ ಎರಡು ವರ್ಷಗಳ ವಿಳಂಬದ ನಂತರ ಕೊನೆಗೂ ಬಹಿರಂಗವಾಗಿವೆ. 2023-24 ಮತ್ತು 2024-25ನೇ ಆರ್ಥಿಕ ವರ್ಷಗಳ ಲೆಕ್ಕಪರಿಶೋಧನಾ (ಆಡಿಟ್) ವರದಿಗಳನ್ನು ಆಗಸ್ಟ್ 2026 ರಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಲಾಗಿದೆ. ಈ ವರದಿಗಳು ಹೊರಬರುತ್ತಿದ್ದಂತೆಯೇ, ನಿಧಿಯ ಪಾರದರ್ಶಕತೆ ಮತ್ತು ಅದರ ಹಿಂದಿನ ಉದ್ದೇಶಗಳ ಬಗ್ಗೆ ತೀವ್ರ ಸ್ವರೂಪದ ಪ್ರಶ್ನೆಗಳು ಎದ್ದಿವೆ. ಸಾರ್ವಜನಿಕರ ಹಣವನ್ನು ನಿರ್ವಹಿಸುವಲ್ಲಿನ ಈ ಅಪಾರದರ್ಶಕತೆಯು ನೇರವಾಗಿ ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದ ಮೇಲೆ ಕಳಂಕ ತರುವಂತೆ ಪರಿಣಮಿಸಿದೆ.

ವರದಿಯ ಅಂಕಿ-ಅಂಶಗಳು ಅಚ್ಚರಿ ಹುಟ್ಟಿಸುವಂತಿವೆ. ಮಾರ್ಚ್ 31, 2025ರ ಅಂತ್ಯಕ್ಕೆ ಪಿಎಂ ಕೇರ್ಸ್ ನಿಧಿಯಲ್ಲಿ ಬರೋಬ್ಬರಿ 8,452 ಕೋಟಿ ರೂಪಾಯಿಗಳ ಬೃಹತ್ ಮೊತ್ತ ಜಮೆಯಾಗಿದೆ. ಆದರೆ, ಆಶ್ಚರ್ಯದ ಸಂಗತಿಯೆಂದರೆ 2024-25ನೇ ಸಾಲಿನಲ್ಲಿ ಈ ನಿಧಿಯಿಂದ ಜನರಿಗಾಗಿ ಖರ್ಚು ಮಾಡಿದ್ದು ಕೇವಲ 87.85 ಲಕ್ಷ ರೂಪಾಯಿಗಳು ಮಾತ್ರ. ಅಂದರೆ, ಲಭ್ಯವಿರುವ ಒಟ್ಟು ನಿಧಿಯ ಶೇಕಡಾ 0.01 ರಷ್ಟನ್ನು (ಅಥವಾ 10,000 ದಲ್ಲಿ 1 ಭಾಗ) ಮಾತ್ರ ಬಳಸಲಾಗಿದೆ. ಇದರಲ್ಲಿ 87.84 ಲಕ್ಷ ರೂಪಾಯಿಗಳನ್ನು ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್ ಯೋಜನೆಗೆ ವಿನಿಯೋಗಿಸಲಾಗಿದ್ದು, ಉಳಿದ 451 ರೂಪಾಯಿಗಳನ್ನು ಬ್ಯಾಂಕ್ ಮತ್ತು ಎಸ್‌ಎಂಎಸ್ ಶುಲ್ಕಗಳಿಗಾಗಿ ಕಡಿತಗೊಳಿಸಲಾಗಿದೆ. ಉಳಿದ 7,846 ಕೋಟಿ ರೂಪಾಯಿಗಳನ್ನು ಬ್ಯಾಂಕ್‌ಗಳ ಸ್ಥಿರ ಠೇವಣಿಗಳಲ್ಲಿ ( ) ಮತ್ತು 605 ಕೋಟಿ ರೂಪಾಯಿಗಳನ್ನು ಉಳಿತಾಯ ಖಾತೆಗಳಲ್ಲಿ ಭದ್ರವಾಗಿ ಇರಿಸಲಾಗಿದೆ.

ಪಿಎಂ ಕೇರ್ಸ್ ನಿಧಿಯು ಈಗ ದೇಣಿಗೆಗಳಿಗಿಂತ ಹೆಚ್ಚಾಗಿ ಬ್ಯಾಂಕ್ ಬಡ್ಡಿಯಿಂದಲೇ ಬೃಹದಾಕಾರವಾಗಿ ಬೆಳೆಯುತ್ತಿದೆ. 2024-25ನೇ ಸಾಲಿನಲ್ಲಿ ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿಯಿಂದಲೇ ಬರೋಬ್ಬರಿ 475 ಕೋಟಿ ರೂಪಾಯಿಗಳ ಆದಾಯ ಬಂದಿದೆ. ಅದೇ ವರ್ಷದಲ್ಲಿ ಸಾರ್ವಜನಿಕರು ಮತ್ತು ಸಂಸ್ಥೆಗಳಿಂದ ಬಂದ ಒಟ್ಟು ದೇಣಿಗೆಯ ಮೊತ್ತ ಕೇವಲ 480 ಕೋಟಿ ರೂಪಾಯಿಗಳು. ಅಂದರೆ, ವರ್ಷವಿಡೀ ಜನರಿಗಾಗಿ ಖರ್ಚು ಮಾಡಲಾದ 87.85 ಲಕ್ಷ ರೂಪಾಯಿಗಳಿಗಿಂತ 500 ಪಟ್ಟಿಗೂ ಹೆಚ್ಚು ಹಣ ಕೇವಲ ಬಡ್ಡಿಯ ರೂಪದಲ್ಲಿಯೇ ನಿಧಿಗೆ ಹರಿದುಬಂದಿದೆ. ಇದು ನಿಧಿಯ ಬಳಕೆಯ ಬಗೆಗಿನ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತದೆ.

ಈ ನಿಧಿಯ ಮೂಲ ಸ್ವರೂಪವೇ ಅತಿ ದೊಡ್ಡ ಗೊಂದಲ ಮತ್ತು ವಿವಾದಕ್ಕೆ ಕಾರಣವಾಗಿದೆ. ನಿಧಿ ಸ್ಥಾಪನೆಯಾದಾಗ, ಪ್ರಧಾನಮಂತ್ರಿಯವರು ಇದರ ಹುದ್ದೆಯ ನಿಮಿತ್ತ ಅಧ್ಯಕ್ಷರು ಹಾಗೂ ಗೃಹ, ರಕ್ಷಣೆ ಮತ್ತು ಹಣಕಾಸು ಸಚಿವರು ಇದರ ಟ್ರಸ್ಟಿಗಳು ಎಂದು ಘೋಷಿಸಿ, ಇದೊಂದು ಸಂಪೂರ್ಣ ಸರ್ಕಾರಿ ನಿಧಿ ಎಂಬ ಭಾವನೆ ಮೂಡಿಸಲಾಗಿತ್ತು. ಇದೇ ಕಾರಣಕ್ಕೆ ಕಂಪನಿಗಳ ಕಾಯ್ದೆ 2013ರ ಅಡಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ () ಮತ್ತು ಆದಾಯ ತೆರಿಗೆ ಕಾಯ್ದೆ (80) ಅಡಿ ಶೇಕಡಾ 100ರಷ್ಟು ತೆರಿಗೆ ವಿನಾಯಿತಿ ನೀಡಿ ಕೋಟಿಗಟ್ಟಲೆ ದೇಣಿಗೆ ಪಡೆಯಲಾಯಿತು. ಆದರೆ, ಮಾಹಿತಿ ಹಕ್ಕು ಕಾಯ್ದೆ () ಅಡಿ ಮಾಹಿತಿ ಕೇಳಿದಾಗ, ಇದೊಂದು ಸರ್ಕಾರಿ ಪ್ರಾಧಿಕಾರವಲ್ಲ, ಬದಲಿಗೆ ಖಾಸಗಿ ಟ್ರಸ್ಟ್ ಆಗಿದ್ದು, ಆರ್.ಟಿ.ಐ ವ್ಯಾಪ್ತಿಗೆ ಬರುವುದಿಲ್ಲ ಎಂದು ಸರ್ಕಾರ ದೆಹಲಿ ಹೈಕೋರ್ಟ್‌ನಲ್ಲಿ ಸಮರ್ಥಿಸಿಕೊಂಡಿತು.

ಲೆಕ್ಕಪರಿಶೋಧನೆಯ ಪ್ರಕ್ರಿಯೆ ಕೂಡ ಭಾರೀ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. 2023-24ನೇ ಸಾಲಿನ ಲೆಕ್ಕಾಚಾರಗಳು ಮುಗಿದು 28 ತಿಂಗಳುಗಳೇ ಕಳೆದಿದ್ದರೂ ಅದರ ವರದಿಯನ್ನು ಸಾರ್ವಜನಿಕರಿಗೆ ಒದಗಿಸಿರಲಿಲ್ಲ. ಈಗ ದಿಢೀರನೆ 2019-20 ರಿಂದ ಆಡಿಟ್ ಮಾಡುತ್ತಿದ್ದ ಹಳೆಯ ಆಡಿಟರ್ ಸಂಸ್ಥೆಯಾಗಿದ್ದ ಅನ್ನು ಬದಲಾಯಿಸಿ, ಹೊಸ ಆಡಿಟರ್ ಆದ ಮೂಲಕ ಎರಡು ವರ್ಷಗಳ (2023-24 ಮತ್ತು 2024-25) ಲೆಕ್ಕಪತ್ರಗಳಿಗೆ ಆಗಸ್ಟ್ 6 ಮತ್ತು 7 ರಂದು ಒಂದೇ ವಾರದಲ್ಲಿ ದೆಹಲಿ ಮತ್ತು ಮುಂಬೈನಲ್ಲಿ ಸಹಿ ಮಾಡಿಸಿಕೊಳ್ಳಲಾಗಿದೆ. ಇದು ವ್ಯವಸ್ಥಿತವಾಗಿ ಬಾಕಿ ಉಳಿಸಿಕೊಂಡಿದ್ದ ಲೆಕ್ಕಾಚಾರಗಳನ್ನು ಏಕಾಏಕಿ ಮುಗಿಸಿದ ಅನುಮಾನವನ್ನು ಹುಟ್ಟುಹಾಕಿದೆ.

ಪಿಎಂ ಕೇರ್ಸ್ ನಿಧಿಗೆ ಬಂದಿರುವ ವಿದೇಶಿ ದೇಣಿಗೆಗಳು, ವಿಶೇಷವಾಗಿ ಚೀನಾದ ಕಂಪನಿಗಳಿಂದ ಬಂದಿರುವ ಹಣ ಈಗ ತೀವ್ರ ರಾಜಕೀಯ ಬಿರುಗಾಳಿ ಸೃಷ್ಟಿಸಿದೆ. ಟಿಕ್‌ಟಾಕ್ (), ಹುವಾವೆ () ಮತ್ತು ಶಿಯೋಮಿ () ಯಂತಹ ಚೀನಾದ ಕಮ್ಯುನಿಸ್ಟ್ ಪಕ್ಷದೊಂದಿಗೆ ನಿಕಟ ಸಂಪರ್ಕ ಹೊಂದಿರುವ ಟೆಕ್ ದೈತ್ಯ ಕಂಪನಿಗಳು ಈ ನಿಧಿಗೆ ಭಾರಿ ಪ್ರಮಾಣದ ದೇಣಿಗೆ ನೀಡಿವೆ ಎಂದು ಕೇರಳದ ಕಾಂಗ್ರೆಸ್ ಘಟಕ ಗಂಭೀರ ಆರೋಪ ಮಾಡಿದೆ. ಲಡಾಖ್ ಪ್ರದೇಶದಲ್ಲಿ 4067 ಚದರ ಕಿ.ಮೀ ಮತ್ತು ಅರುಣಾಚಲ ಪ್ರದೇಶದಲ್ಲಿ ಚೀನಾ ನಮ್ಮ ಭೂಮಿಯನ್ನು ಅತಿಕ್ರಮಿಸುತ್ತಿದ್ದರೂ ಪ್ರಧಾನಿ ಮೌನ ವಹಿಸಲು ಈ ದೇಣಿಗೆಗಳೇ ಕಾರಣವೇ ಎಂಬ ಖಾರವಾದ ಪ್ರಶ್ನೆಯನ್ನು ಪ್ರತಿಪಕ್ಷಗಳು ಎತ್ತಿವೆ.

ಲೆಕ್ಕಪತ್ರಗಳಲ್ಲಿರುವ ಮತ್ತೊಂದು ನಿಗೂಢ ಅಂಶವೆಂದರೆ ಕೋಟ್ಯಂತರ ರೂಪಾಯಿಗಳ ಮರುಪಾವತಿ () ಮೊತ್ತ. 2024-25ನೇ ಸಾಲಿನಲ್ಲಿ ವಿವಿಧ ಅನುಷ್ಠಾನ ಸಂಸ್ಥೆಗಳು ( ) ಬರೋಬ್ಬರಿ 324.66 ಕೋಟಿ ರೂಪಾಯಿಗಳನ್ನು ಪಿಎಂ ಕೇರ್ಸ್ ನಿಧಿಗೆ ಹಿಂದಿರುಗಿಸಿವೆ. ಆದರೆ, ಈ ಬೃಹತ್ ಮೊತ್ತವನ್ನು ಯಾವ ಸಂಸ್ಥೆಗಳಿಗೆ, ಯಾವ ಉದ್ದೇಶಕ್ಕಾಗಿ ನೀಡಲಾಗಿತ್ತು? ಮತ್ತು ಅವರು ಅದನ್ನು ಏಕೆ ಮರುಪಾವತಿಸಿದರು? ಎಂಬ ಯಾವ ಪ್ರಶ್ನೆಗಳಿಗೂ ವರದಿಯಲ್ಲಿ ಕನಿಷ್ಠ ವಿವರಣೆಯನ್ನೂ ನೀಡಲಾಗಿಲ್ಲ. ಕಳಪೆ ಉಪಕರಣಗಳ ಸರಬರಾಜಿಗೆ ಸಂಬಂಧಿಸಿದಂತೆ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಈ ಮರುಪಾವತಿ ನಡೆದಿದೆಯೇ ಎಂದು ಮಾಹಿತಿ ಹಕ್ಕು ಹೋರಾಟಗಾರ್ತಿ ಅಂಜಲಿ ಭಾರದ್ವಾಜ್ ಪ್ರಶ್ನಿಸಿದ್ದಾರೆ.

ನಿಧಿಯ ಮೇಲಿನ ಸಾರ್ವಜನಿಕರ ವಿಶ್ವಾಸವೂ ಕ್ರಮೇಣ ಕುಸಿಯುತ್ತಿರುವಂತೆ ಅಂಕಿ-ಅಂಶಗಳಿಂದ ಸ್ಪಷ್ಟವಾಗಿ ಗೋಚರಿಸುತ್ತಿದೆ. ಆರಂಭಿಕ ವರ್ಷದಲ್ಲಿ (2020-21) 7,184 ಕೋಟಿ ರೂಪಾಯಿಗಳಷ್ಟಿದ್ದ ದೇಶೀಯ ದೇಣಿಗೆ, 2021-22ರಲ್ಲಿ 1,896 ಕೋಟಿಗೆ ಹಾಗೂ 2023-24ರಲ್ಲಿ 681 ಕೋಟಿ ರೂಪಾಯಿಗಳಿಗೆ ಕುಸಿದಿತ್ತು. ಇದೀಗ 2024-25ನೇ ಸಾಲಿನಲ್ಲಿ ಅದು ಶೇ. 30ರಷ್ಟು ಕುಸಿದು ಕೇವಲ 479 ಕೋಟಿ ರೂಪಾಯಿಗಳಿಗೆ ತಲುಪಿದೆ. ಅಂತೆಯೇ, ವಿದೇಶಿ ದೇಣಿಗೆ ಕೂಡ 2020-21ರಲ್ಲಿದ್ದ 495 ಕೋಟಿ ರೂ.ಗಳಿಂದ ಭಾರಿ ಇಳಿಕೆ ಕಂಡು ಪ್ರಸ್ತುತ ಕೇವಲ 92.8 ಲಕ್ಷ ರೂ.ಗಳಿಗೆ ಬಂದು ನಿಂತಿದೆ. ಪಾರದರ್ಶಕತೆಯ ಕೊರತೆಯೇ ಈ ಇಳಿಕೆಗೆ ಪ್ರಮುಖ ಕಾರಣ ಎನ್ನಲಾಗುತ್ತಿದೆ.

ಈಗ ಲಭ್ಯವಾಗಿರುವ ಅಧಿಕೃತ ಜಮಾ-ಖರ್ಚಿನ ದಾಖಲೆ ( ) ಮತ್ತು ನಕ್ಷೆಗಳು ಈ ಮೇಲಿನ ಎಲ್ಲಾ ಅಂಶಗಳಿಗೆ ಬಲವಾದ ಸಾಕ್ಷ್ಯಗಳನ್ನು ಒದಗಿಸಿವೆ. 2025ರ ಮಾರ್ಚ್ 31ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಅಧಿಕೃತ ದಾಖಲೆಯ ಪ್ರಕಾರ, ನಿಧಿಯ ನಿಖರವಾದ ಮುಕ್ತಾಯದ ಶಿಲ್ಕು ( ) ₹84,52,06,70,758 ಆಗಿದ್ದು, ಈ ಲೆಕ್ಕಪತ್ರಗಳಿಗೆ ಮುಂಬೈನಲ್ಲಿ ಕೆಕೆಸಿ ಆಂಡ್ ಅಸೋಸಿಯೇಟ್ಸ್ ಲೆಕ್ಕಪರಿಶೋಧಕರು ಆಗಸ್ಟ್ 7, 2026 ರಂದು ಹಾಗೂ ದೆಹಲಿಯ ಅಧಿಕಾರಿಗಳು ಆಗಸ್ಟ್ 6, 2026 ರಂದು ಸಹಿ ಹಾಕಿರುವುದು ದಾಖಲಾಗಿದೆ. ಇದಲ್ಲದೆ, ಬಿಡುಗಡೆಯಾಗಿರುವ ನಕ್ಷೆಗಳು ನಿಧಿಯ ಹಣಕಾಸು ನಿರ್ವಹಣಾ ತಂತ್ರವನ್ನು ಬಿಚ್ಚಿಡುತ್ತವೆ; 2023-24ನೇ ಸಾಲಿನಿಂದ ಒಟ್ಟು ನಿಧಿಯ ಶೇಕಡಾ 93ರಷ್ಟು ಬೃಹತ್ ಮೊತ್ತವನ್ನು ಉಳಿತಾಯ ಖಾತೆಗಳಿಂದ ಸಂಪೂರ್ಣವಾಗಿ ಸ್ಥಿರ ಠೇವಣಿಗಳಿಗೆ ( ) ಸ್ಥಳಾಂತರಿಸಲಾಗಿದೆ. ಈ ಠೇವಣಿಗಳ ನೇರ ಪರಿಣಾಮವಾಗಿ, 2024-25ನೇ ಸಾಲಿನಲ್ಲಿ ನಿಧಿಗೆ ಬಂದ ಬಡ್ಡಿ ಆದಾಯವು (₹475 ಕೋಟಿ) ಸಾರ್ವಜನಿಕರಿಂದ ಹರಿದುಬಂದ ದೇಣಿಗೆಯ ಮೊತ್ತಕ್ಕೆ ಬಹುತೇಕ ಸಮಾನವಾಗಿ ಬೆಳೆದು ನಿಂತಿರುವುದನ್ನು ಮತ್ತೊಂದು ನಕ್ಷೆಯು ಸ್ಪಷ್ಟವಾಗಿ ಎತ್ತಿ ತೋರಿಸುತ್ತಿದೆ.

ಕರೋನಾ ಸಾಂಕ್ರಾಮಿಕ ಮುಗಿದಿರುವುದರಿಂದ ಹಣದ ಖರ್ಚು ಕಡಿಮೆಯಾಗಿದೆ ಮತ್ತು ಭವಿಷ್ಯದ ರಾಷ್ಟ್ರೀಯ ತುರ್ತು ಪರಿಸ್ಥಿತಿಗಳಿಗಾಗಿ ಬಡ್ಡಿಯ ಮೂಲಕ ಹಣವನ್ನು ಬೆಳೆಸಿ ಕಾಯ್ದಿರಿಸಲಾಗುತ್ತಿದೆ ಎಂಬುದು ಸರ್ಕಾರದ ಕಡೆಯ ಸಮರ್ಥನೆಯಾಗಿದೆ. ಆದರೆ, ಕೋಟ್ಯಂತರ ಜನರ ಭಾವನೆಗಳು ಮತ್ತು ದೇಣಿಗೆಯಿಂದ ರೂಪಿತವಾದ ಬೃಹತ್ ನಿಧಿಯನ್ನು ಒಂದು ಖಾಸಗಿ ಟ್ರಸ್ಟ್ ಎಂಬಂತೆ ನಿರ್ವಹಿಸುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ. ಲೆಕ್ಕಪತ್ರಗಳನ್ನು ವರ್ಷಗಟ್ಟಲೆ ಬಚ್ಚಿಟ್ಟು, ಸಾರ್ವಜನಿಕ ಉತ್ತರದಾಯಿತ್ವದಿಂದ ನುಣುಚಿಕೊಳ್ಳುವ ಪ್ರವೃತ್ತಿ ಪ್ರಧಾನಿ ಮೋದಿಯವರ ಆಡಳಿತದ ಭರವಸೆಗಳ ಮೇಲೆ ಅಳಿಸಲಾಗದ ಕಳಂಕವನ್ನು ಮೂಡಿಸಿದೆ.

ವಂದೇ ಮಾತರಂನ ಎರಡು ಚರಣಗಳ ಹಾಡಿದರೆ ಸಾಕೇ? ಉಳಿದ ನಾಲ್ಕು ಚರಣಗಳು ಬೇಕೇ?

ಎಪ್ಸ್ಟೀನ್ ಫೈಲ್ಸ್ ನಲ್ಲಿ ಮೋದಿ ಮತ್ತು ಅವರ ಸಂಪುಟದ ಮಂತ್ರಿಯ ಹೆಸರಿರುವ ಆರೋಪ, ಚೀನಾ ದೇಶ ಭಾರತದ ಭೂಭಾಗವನ್ನು ಅತಿಕ್ರಮಿಸಿದ ಜನರಲ್ ನರವಣೆ ಪುಸ್ತಕದ ಬಣ್ಣನೆ, ವಾಣಿಜ್ಯ ಒಪ್ಪಂದಗಳಲ್ಲಿ ಮೋದಿ ಸರ್ಕಾರ, ಭಾರತವನ್ನು ಟ್ರಂಪ್ ಗೆ ಮಾರಿಕೊಂಡರೆಂಬ ವಿವಾದಗಳು ಮುತ್ತಿದ್ದ ಕಾಲವದು. ಈ ಸಂಗತಿಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲೆಂದೇ ವಂದೇ ಮಾತರಂ ಕುರಿತ ಕಾನೂನು ಜಾರಿಯಾಯಿತು.

1937ರಲ್ಲಿ ಮಹಾತ್ಮ ಗಾಂಧಿ, ಸುಭಾಷ್‌ಚಂದ್ರ ಬೋಸ್ ಸೇರಿದಂತೆ ಹಲವು ನಾಯಕರ ಬೆಂಬಲದೊಂದಿಗೆ ಕೈಗೊಂಡ ನಿರ್ಧಾರವನ್ನು ಅನುಸರಿಸಿ, ವಂದೇ ಮಾತರಂನ ಮೊದಲ ಎರಡು ಚರಣಗಳನ್ನಷ್ಟೇ ಹಾಡುವುದಾಗಿ ಕಾಂಗ್ರೆಸ್ ಹೇಳಿದೆ. ಹಾಗಾದರೆ ಉಳಿದ ನಾಲ್ಕು ಚರಣಗಳಲ್ಲಿ ಏನಿದೆ?

ಅವು ವಿವಾದಕ್ಕೆ ಕಾರಣವಾಗಿರುವುದು ಏಕೆ?

ತನ್ನ ನಿಲುವಿಗೆ ಸಮರ್ಥನೆಯಾಗಿ 1937ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯವನ್ನು ಕಾಂಗ್ರೆಸ್ ಉಲ್ಲೇಖಿಸಿದೆ. ಮಹಾತ್ಮ ಗಾಂಧಿ, ರವೀಂದ್ರನಾಥ ಟಾಗೋರ್ ಸೇರಿದಂತೆ ಸ್ವಾತಂತ್ರ್ಯ ಹೋರಾಟದ ಪ್ರಮುಖ ನಾಯಕರು, ವಂದೇ ಮಾತರಂನ ಸಾರ್ವಜನಿಕ ಗಾಯನವನ್ನು ಮೊದಲ ಎರಡು ಚರಣಗಳಿಗೆ ಸೀಮಿತಗೊಳಿಸುವ ನಿಲುವಿಗೆ ಬೆಂಬಲ ನೀಡಿದ್ದರು ನೆಹರೂ, ಸರ್ದಾರ್ ಪಟೇಲ್, ಸುಭಾಷ್ ಚಂದ್ರ ಬೋಸರಿದ್ದ ಕಾಂಗ್ರೆಸ್‌ನ ಉನ್ನತ ಸಮಿತಿಯು ರವೀಂದ್ರನಾಥ ಟಾಗೋರರ ಜೊತೆಗಿನ ಸಮಾಲೋಚನೆಯೊಂದಿಗೆ ವಂದೇ ಮಾತರಂ ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲು ಒಪ್ಪಿಗೆ ನೀಡಿತ್ತು.

ಹಿಂದೂ, ಮುಸ್ಲಿಮ್, ಸಿಖ್ ಸಿಪಾಯಿಗಳಿರುವ ಆಜಾದ್ ಹಿಂದ್ ಸೇನೆಯಲ್ಲಿ ಸುಭಾಷ್ ಚಂದ್ರ ಬೋಸರು ಒಮ್ಮೆಯೂ ವಂದೇ ಮಾತರಂ ಚರಣಗಳನ್ನು ಹಾಡಿಸಲಿಲ್ಲ.

ವಂದೇ ಮಾತರಂ ಹಾಡುವುದು ಅಥವಾ ನುಡಿಸುವುದನ್ನು ಉದ್ದೇಶಪೂರ್ವಕವಾಗಿ ತಡೆಯುವುದು ಅಥವಾ ಅಡ್ಡಿಪಡಿಸುವುದು ಅಪರಾಧ ಎಂಬ ಕಾನೂನನ್ನು ಮೋದಿ ಸರ್ಕಾರ ಐದು ತಿಂಗಳ ಹಿಂದೆ ಹಠಾತ್ ಜಾರಿಗೊಳಿಸಿತ್ತು. ಎಪ್ಸ್ಟೀನ್ ಫೈಲ್ಸ್ ನಲ್ಲಿ ಮೋದಿ ಮತ್ತು ಅವರ ಸಂಪುಟದ ಮಂತ್ರಿಯ ಹೆಸರಿರುವ ಆರೋಪ, ಚೀನಾ ದೇಶ ಭಾರತದ ಭೂಭಾಗವನ್ನು ಅತಿಕ್ರಮಿಸಿದ ಜನರಲ್ ನರವಣೆ ಪುಸ್ತಕದ ಬಣ್ಣನೆ, ವಾಣಿಜ್ಯ ಒಪ್ಪಂದಗಳಲ್ಲಿ ಮೋದಿ ಸರ್ಕಾರ, ಭಾರತವನ್ನು ಟ್ರಂಪ್ ಗೆ ಮಾರಿಕೊಂಡರೆಂಬ ವಿವಾದಗಳು ಮುತ್ತಿದ್ದ ಕಾಲವದು. ಈ ಸಂಗತಿಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲೆಂದೇ ವಂದೇ ಮಾತರಂ ಕುರಿತ ಕಾನೂನು ಜಾರಿಯಾಯಿತು.

ವಂದೇ ಮಾತರಂ ರಚನೆಯ ಹಿನ್ನೆಲೆ

ವಂದೇ ಮಾತರಂ ಎಂದರೆ ತಾಯೇ, ನಿನಗೆ ವಂದಿಸುವೆ ಎಂದು ಅರ್ಥ. ಬಂಕಿಮಚಂದ್ರ ಚಟರ್ಜಿ 1875ರಲ್ಲಿ ಸಂಸ್ಕೃತ ಮಿಶ್ರಿತ ಬಂಗಾಳಿ ಭಾಷೆಯಲ್ಲಿ ಈ ಗೀತೆಯನ್ನು ರಚಿಸಿದರು. ಆರು ವರ್ಷಗಳ ಬಳಿಕ, ಅವರು ಇದನ್ನು ತಮ್ಮ ಆನಂದಮಠ ಕಾದಂಬರಿಯಲ್ಲಿ ಸೇರಿಸಿದರು. ಆಗ ಅವರು ಬ್ರಿಟಿಷ್ ಸರ್ಕಾರದಲ್ಲಿ ಅಧಿಕಾರಿಯಾಗಿದ್ದರು.

18ನೇ ಶತಮಾನದ ಅಂತ್ಯದಲ್ಲಿ ಬಂಗಾಳದ ನವಾಬ ಮತ್ತು ಆನಂತರ ಆತನನ್ನು ಸೋಲಿಸಿ ಸರ್ಕಾರ ಸ್ಥಾಪಿಸಿದ ಬ್ರಿಟಿಷರ ಶೋಷಣೆಯ ವಿರುದ್ಧ ನಡೆದ ಸನ್ಯಾಸಿಗಳು ಮತ್ತು ಫಕೀರರ ಬಂಡಾಯಗಳ ಹಿನ್ನೆಲೆಯನ್ನು ಆನಂದಮಠ ಕಾದಂಬರಿ ವಿಕೃತಗೊಳಿಸುತ್ತದೆ. ಕೇವಲ ಹಿಂದೂ ಸನ್ಯಾಸಿಗಳ ಪಾತ್ರವನ್ನು ಉಲ್ಲೇಖಿಸುತ್ತದೆ. ದೇಶದ ಪ್ರಧಾನ ಶತ್ರುಗಳು ಬ್ರಿಟಿಷರಲ್ಲ, ಮುಸಲ್ಮಾನರು ಎಂದೇ ಕಾದಂಬರಿ ಬಿಂಬಿಸುತ್ತದೆ. ಬಂಗಾಳದ ಕ್ಷಾಮಕ್ಕೆ ಮುಸಲ್ಮಾನರೇ ಕಾರಣವೆಂದು ದೂಷಿಸಿ, ಅವರ ಮಾರಣಹೋಮಕ್ಕೆ ಹಿಂದೂಗಳನ್ನು ಸಜ್ಜಾಗಿಸಲು ಕರೆ ನೀಡುತ್ತದೆ. ನಮಗೆ ಅಧಿಕಾರ ಬೇಕಿಲ್ಲ, ಎಲ್ಲ ಮುಸಲ್ಮಾನರನ್ನು ಕೊಂದು ಹಾಕುವುದೇ ನಮ್ಮ ಉದ್ದೇಶ. ಅವರು ಹಿಂದೂ ದೇವತೆಗಳ ಶತ್ರುಗಳು ಎಂದು ಕಾದಂಬರಿಯ ನಾಯಕ ಸಾರುತ್ತಾನೆ. ತಮ್ಮ ಕಾದಂಬರಿಯು ಬ್ರಿಟಿಷ್ ವಿರೋಧಿಯಲ್ಲ ಎಂದೂ ಸ್ಪಷ್ಟಪಡಿಸಿದ್ದರು ಬಂಕಿಮಚಂದ್ರ ಚಟರ್ಜಿ.



ಆನಂದಮಠ ಮತ್ತು ವಂದೇ ಮಾತರಂ ನ್ನು ಬ್ರಿಟಿಷರು ಯಾಕೆ ನಿಷೇಧಿಸಲಿಲ್ಲ

ಬ್ರಿಟಿಷ್ ಆಡಳಿತದ ಅಧಿಕೃತ ಗೆಝೆಟ್ ನಲ್ಲಿ ಈ ಕಾದಂಬರಿಯ ಪ್ರಸ್ತಾಪವಿತ್ತು. ಈ ಕಾದಂಬರಿಯು ಮುಸ್ಲಿಮ್ ಆಳ್ವಿಕೆಯ ಅಂತ್ಯವನ್ನು ಬಯಸುವ ಮತ್ತು ಬ್ರಿಟಿಷರು ಭಾರತದ ಮೇಲೆ ಸಂಪೂರ್ಣ ಸ್ವಾಮ್ಯ ಪಡೆಯಬೇಕೆಂಬ ಆಶಯವುಳ್ಳ ಕಾದಂಬರಿ ಎಂದು 1883ರ ಮಾರ್ಚ್ 31ರ ಬ್ರಿಟಿಷ್ ಗೆಜೆಟ್ ನಲ್ಲಿ ಮೆಚ್ಚುಗೆ ವ್ಯಕ್ತಪಡಿಸಲಾಗಿತ್ತು.

ಆನಂದ ಮಠ ಕಾದಂಬರಿಯು ಮುಸ್ಲಿಮರ ವಿರುದ್ಧ ಘೋಷಗೀತೆ ಎಂದು ಬ್ರಿಟಿಷ್ ವೈಸರಾಯ್ ಪರಿಷತ್ತಿನ ಸದಸ್ಯ ಸರ್ ಹೆನ್ರಿ ಕ್ರೀಕ್ ಬಣ್ಣಿಸಿದ್ದನು. ಈ ಕಾದಂಬರಿಯನ್ನು ಅಥವಾ ವಂದೇ ಮಾತರಂ ಗೀತೆಯನ್ನು ಬ್ರಿಟಿಷರು ನಿಷೇಧಿಸದಿರುವ ರಹಸ್ಯವೂ ಇದೇ ಆಗಿದೆ.

1905ರಿಂದ 1908ರವರೆಗೆ ನಡೆದ ಸ್ವದೇಶಿ ಚಳವಳಿಯ ವೇಳೆ ವಂದೇ ಮಾತರಂ ಹೋರಾಟದ ಘೋಷಣೆಯಾಗಿ ರೂಪುಗೊಂಡಿತು. ಆ ಮೂಲಕ ಅದು ಭಾರತದ ಸ್ವಾತಂತ್ರ್ಯ ಹೋರಾಟದೊಂದಿಗೆ ಆಳವಾಗಿ ಬೆಸೆದುಕೊಂಡಿತು.

ಹಾಡಿನಲ್ಲಿರುವ ಕೆಲವು ಉಲ್ಲೇಖಗಳಿಗೆ ಮುಸ್ಲಿಂ ಲೀಗ್ ವಿರೋಧ ವ್ಯಕ್ತಪಡಿಸಿತು. ಜೊತೆಗೆ, ತಾಯಿಗೆ ತಲೆಬಾಗುವುದು ಮೂರ್ತಿಪೂಜೆಗೆ ಸಮಾನ ಎಂದು ಅದು ವಾದಿಸಿತು. 1938ರ ಅಕ್ಟೋಬರ್‌ನಲ್ಲಿ ಕರಾಚಿಯಲ್ಲಿ ನಡೆದ ಸಿಂಧ್ ಪ್ರಾಂತೀಯ ಮುಸ್ಲಿಂ ಲೀಗ್ ಸಮ್ಮೇಳನದಲ್ಲಿ ಮೊಹಮ್ಮದ್ ಅಲಿ ಜಿನ್ನಾ, ಕಾಂಗ್ರೆಸ್ ವಿಧಾನಸಭೆಗಳ ಕಲಾಪವನ್ನು ವಂದೇ ಮಾತರಂನೊಂದಿಗೆ ಆರಂಭಿಸುತ್ತಿದೆ ಎಂದು ಟೀಕಿಸಿದ್ದರು. ಅದು ಕೇವಲ ಮೂರ್ತಿಪೂಜೆಯ ಸ್ವರೂಪದ್ದಷ್ಟೇ ಅಲ್ಲದೆ, ಅದರ ಮೂಲ ಮತ್ತು ಅರ್ಥದಲ್ಲಿ ಮುಸ್ಲಿಮರ ವಿರುದ್ಧ ದ್ವೇಷ ಹರಡುವ ಗೀತೆಯಾಗಿದೆ ಎಂದು ಆರೋಪಿಸಿದ್ದರು.

1937ರ ಕಾಂಗ್ರೆಸ್ ನಿರ್ಧಾರ

1937ರ ಅಕ್ಟೋಬರ್‌ನಲ್ಲಿ ಜವಾಹರಲಾಲ್ ನೆಹರು ಅವರು ಸುಭಾಷ್‌ಚಂದ್ರ ಬೋಸ್ ಅವರಿಗೆ ಬರೆದ ಪತ್ರದಲ್ಲಿ, ಆನಂದಮಠದ ಹಿನ್ನೆಲೆಯ ಕಾರಣದಿಂದ ವಂದೇ ಮಾತರಂ ಮುಸ್ಲಿಮರಲ್ಲಿ ಅಸಮಾಧಾನ ಹುಟ್ಟಿಸಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು. ಆದರೆ, ಇದರ ವಿರುದ್ಧ ಎದ್ದಿದ್ದ ಆಕ್ರೋಶವನ್ನು ಕೋಮುವಾದಿಗಳು ಸೃಷ್ಟಿ ಎಂದೂ ಹೇಳಿದ್ದರು.

ನೆಹರು ಮತ್ತು ಬೋಸ್ ಸೇರಿದಂತೆ ಹಲವು ನಾಯಕರು ಈ ವಿವಾದದ ಕುರಿತು ರವೀಂದ್ರನಾಥ ಟಾಗೋರ್ ಅವರ ಅಭಿಪ್ರಾಯವನ್ನು ಕೇಳಿದ್ದರು.

ಆನಂದಮಠದ ಹಿನ್ನೆಲೆಯೊಂದಿಗೆ ಸಂಪೂರ್ಣ ಕವನವನ್ನು ಓದಿದಾಗ ಅದು ಮುಸ್ಲಿಮರ ಭಾವನೆಗಳಿಗೆ ನೋವುಂಟುಮಾಡಬಹುದು. ಆದರೆ ಮೊದಲ ಎರಡು ಚರಣಗಳು ಸ್ವತಂತ್ರ ಅಸ್ತಿತ್ವ ಹೊಂದಿವೆ ಮತ್ತು ಸ್ಫೂರ್ತಿ ಪ್ರೇರಣೆ ನೀಡುತ್ತವೆ. ಅವುಗಳಲ್ಲಿ ಆಕ್ಷೇಪಾರ್ಹವಾದದ್ದು ಇಲ್ಲ ಎಂದು ಟಾಗೋರ್ ತಿಳಿಸಿದ್ದರು.

ಇದಾದ ನಂತರ 1937ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ರಾಷ್ಟ್ರೀಯ ಸಭೆಗಳಲ್ಲಿ ವಂದೇ ಮಾತರಂ ಹಾಡುವಾಗ ಅದರ ಮೊದಲ ಎರಡು ಚರಣಗಳನ್ನಷ್ಟೇ ಹಾಡಬೇಕು ಎಂದು ಶಿಫಾರಸು ಮಾಡಿತು. ಮೊದಲ ಎರಡು ಚರಣಗಳಲ್ಲಿ ಯಾರಾದರೂ ಆಕ್ಷೇಪಿಸಬಹುದಾದ ಅಂಶಗಳಿಲ್ಲ ಮತ್ತು ನಂತರದ ಚರಣಗಳು ಜನಸಾಮಾನ್ಯರಲ್ಲಿ ಹೆಚ್ಚು ಪರಿಚಿತವೂ ಅಲ್ಲ ಎಂದು ನಿರ್ಣಯದಲ್ಲಿ ಹೇಳಲಾಗಿತ್ತು.

ಮಹಾತ್ಮ ಗಾಂಧಿ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ವಂದೇ ಮಾತರಂ ಪಡೆದಿದ್ದ ಮಹತ್ವವನ್ನು ಸಮರ್ಥಿಸಿಕೊಂಡಿದ್ದರು. ಆದರೆ ಅದನ್ನು ಯಾರ ಮೇಲೂ ಬಲವಂತವಾಗಿ ಹೇರಬಾರದು ಎಂಬುದು ಅವರ ನಿಲುವಾಗಿತ್ತು.

1939ರ ಜುಲೈನಲ್ಲಿ ಹರಿಜನ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಗಾಂಧಿ, ಬಂಗಾಳ ವಿಭಜನೆಯ ವಿರುದ್ಧ ನಡೆದ ಚಳವಳಿಯ ಸಮಯದಲ್ಲಿ ವಂದೇ ಮಾತರಂ ಹಿಂದೂ ಮತ್ತು ಮುಸ್ಲಿಮರಿಬ್ಬರಲ್ಲೂ ಅತ್ಯಂತ ಪ್ರಭಾವಿ ಹೋರಾಟದ ಘೋಷಣೆಯಾಗಿತ್ತು ಎಂದು ನೆನೆದಿದ್ದರು. ಆದರೆ, ಹಲವು ಧರ್ಮಗಳ ಜನ ಪಾಲ್ಗೊಂಡಿರುವ ಸಭೆಯಲ್ಲಿ ವಂದೇ ಮಾತರಂ ಹಾಡುವ ವಿಚಾರವಾಗಿ ತಾವು ಜಗಳ ಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಕಾಂಗ್ರೆಸ್ ಅನುಮೋದಿಸಿದ ಎರಡೇ ಚರಣಗಳ ಸಂಕ್ಷಿಪ್ತ ಆವೃತ್ತಿಗೂ ಯಾರಾದರೂ ತಕರಾರು ತೆಗೆದರೆ, ಅಲ್ಲಿ ಹಾಡುವುದನ್ನೇ ಕೈಬಿಡಬೇಕು ಎಂಬುದು ಗಾಂಧಿಯವರ ನಿಲುವಾಗಿತ್ತು.

ಮೊದಲ ಎರಡು ಚರಣಗಳಲ್ಲಿ ಏನಿದೆ?

ವಂದೇ ಮಾತರಂನ ಮೊದಲ ಎರಡು ಚರಣಗಳು ಮಾತೃಭೂಮಿಯ ಪ್ರಕೃತಿ ಸೌಂದರ್ಯ ಮತ್ತು ಸಮೃದ್ಧಿಯನ್ನು ವರ್ಣಿಸುತ್ತವೆ. ಅವು ದೇಶದ ಸಮೃದ್ಧ ಜಲಸಂಪತ್ತು, ಫಲವತ್ತಾದ ಭೂಮಿ, ತಂಪಾದ ಗಾಳಿ, ಹಸಿರು ಬೆಳೆಗಳು, ಬೆಳದಿಂಗಳ ರಾತ್ರಿ, ಹೂಗಳಿಂದ ಕಂಗೊಳಿಸುವ ಮರಗಳು, ಮಧುರವಾದ ಮಾತು, ಸುಖ ಮತ್ತು ವರಗಳನ್ನು ನೀಡುವ ತಾಯ್ನಾಡನ್ನು ಸ್ತುತಿಸುತ್ತವೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಐತಿಹಾಸಿಕ ಪಾತ್ರ ವಹಿಸಿದ್ದ ವಂದೇ ಮಾತರಂಗೆ ಜನ ಗಣ ಮನದಷ್ಟೇ ಗೌರವ ನೀಡಲಾಗುವುದು ಎಂದು ಸಂವಿಧಾನ ರಚನಾ ಸಭೆಯ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ 1950ರ ಜನವರಿ 24ರಂದು ತಿಳಿಸಿದ್ದರು. ಸಾಂಪ್ರದಾಯಿಕವಾಗಿ ರಾಷ್ಟ್ರಗೀತೆಯ ಸ್ಥಾನಮಾನ ಪಡೆದಿರುವ ವಂದೇ ಮಾತರಂ ಆವೃತ್ತಿಯು ಮೊದಲ ಎರಡು ಚರಣಗಳನ್ನಷ್ಟೇ ಒಳಗೊಂಡಿದೆ.

ಉಳಿದ ನಾಲ್ಕು ಚರಣಗಳಲ್ಲಿ ಏನಿದೆ?

ಮಾತೃಭೂಮಿಯ ವರ್ಣನೆ ಕೇವಲ ಪ್ರಕೃತಿ ಸೌಂದರ್ಯಕ್ಕೆ ಸೀಮಿತವಾಗುವುದಿಲ್ಲ. ತಾಯ್ನಾಡನ್ನು ಶಕ್ತಿಯುತ ದೈವಿಕ ರೂಪವೆಂದು ಚಿತ್ರಿಸಲಾಗಿದೆ. ಕೋಟ್ಯಂತರ ಕಂಠಗಳ ಘರ್ಜನೆ ಮತ್ತು ಕೋಟ್ಯಂತರ ಕೈಗಳು ಶಸ್ತ್ರಾಸ್ತ್ರ ಹಿಡಿದು ತಾಯ್ನಾಡಿನ ರಕ್ಷಣೆಗೆ ಸಜ್ಜಾಗಿರುವ ಚಿತ್ರಣವಿದೆ. ತಾಯಿ ಅಪಾರ ಶಕ್ತಿಶಾಲಿಯೇ ವಿನಾ ದುರ್ಬಲಳಲ್ಲ ಎಂಬ ಸಂದೇಶವಿದೆ.

ನಾಲ್ಕನೇ ಚರಣದಲ್ಲಿ, ತಾಯ್ನೆಲವೇ ಅರಿವು, ಧರ್ಮ, ಹೃದಯ, ಜೀವಶಕ್ತಿ ಹಾಗೂ ಭಕ್ತಿ ಎಂದು ಬಣ್ಣಿಸಲಾಗಿದೆ. ಪ್ರತಿಯೊಂದು ದೇವಾಲಯದಲ್ಲೂ ತಾಯಿಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ ಎಂಬ ರೀತಿಯ ಧಾರ್ಮಿಕ ರೂಪಕ ಮೂಡಿಸಲಾಗಿದೆ. ಐದನೇ ಚರಣದಲ್ಲಿ, ಮಾತೃಭೂಮಿಯನ್ನು ಹಿಂದೂ ದೇವತೆಗಳೊಂದಿಗೆ ಹೋಲಿಸಲಾಗುತ್ತದೆ. ಅವಳನ್ನು: ದುರ್ಗೆ ಹತ್ತು ಆಯುಧಗಳನ್ನು ಧರಿಸಿದ ಶಕ್ತಿದೇವತೆ, ಕಮಲಾ/ ಲಕ್ಷ್ಮಿ ಸಮೃದ್ಧಿಯ ದೇವತೆ, ವಾಣಿ/ಸರಸ್ವತಿ ವಿದ್ಯೆಯ ದೇವತೆ ಎಂದು ಕೊಂಡಾಡಲಾಗಿದೆ.

ಹಿಂದೂ ದೇವತೆಗಳ ನೇರ ಉಲ್ಲೇಖವೇ ಮುಸ್ಲಿಂ ಧಾರ್ಮಿಕ ವಿದ್ವಾಂಸರ ಪ್ರಮುಖ ಆಕ್ಷೇಪಕ್ಕೆ ಕಾರಣವಾಗಿದೆ. ಇಸ್ಲಾಮ್ ಧರ್ಮದಲ್ಲಿ ಕಟ್ಟುನಿಟ್ಟಾದ ಏಕದೇವೋಪಾಸನೆಯ ತತ್ವವಿದೆ. ಭಾರತವನ್ನು ದೇವತೆಯ ರೂಪದಲ್ಲಿ ಚಿತ್ರಿಸುವುದು ಮತ್ತು ಅದಕ್ಕೆ ವಂದಿಸಲಾಗದು. ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು ಎಂಬ ಇಸ್ಲಾಮಿನ ಮೂಲಭೂತ ತತ್ವಕ್ಕೆ ವಿರುದ್ಧ ಎಂಬುದು ಅವರು ವಾದ.

ಹಾಡಿನ ನಂತರದ ಭಾಗಗಳು ಯುದ್ಧಕ್ಕೆ ಕರೆ ನೀಡುತ್ತವೆ. ಆನಂದಮಠದ ಕಥಾ ಸನ್ನಿವೇಶದಲ್ಲಿ ಮುಸ್ಲಿಮರು ಎದುರಾಳಿಗಳಾಗಿ ಕಾಣಿಸಿಕೊಳ್ಳುತ್ತಾರೆ ಮತ್ತು ಮಾತೃಭೂಮಿ ಹಿಂದೂ ದೇವತೆಯ ರೂಪ ಪಡೆಯುವುದರಿಂದ ಮುಸ್ಲಿಮರಲ್ಲಿ ಅನ್ಯತೆಯ ಭಾವನೆ ಉಂಟಾಗುತ್ತದೆ ಎಂಬುದು ಅವರ ವಿಶ್ಲೇಷಣೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR